ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 6 । ಸಂಚಿಕೆ : 11 । ನವೆಂಬರ್ - 2024 । ಪುಟಗಳು : 20 । ಬೆಲೆ : 25/-





## 71ನೇ ಅಖಿಲ ಭಾರತ ಸಹಕಾರ ಸಪ್ತಾಹ - 2024

14 ರಿಂದ 20, ನವೆಂಬರ್ 2024

ಧ್ಯೇಯ : "ವಿಕಸಿತ ಭಾರತ" ನಿರ್ಮಾಣದಲ್ಲಿ
ಸಹಕಾರ ಸಂಸ್ಥೆಗಳ ಪಾತ್ರ



# 71ನೇ ಅಖಿಲ ಭಾರತ ಸಹಕಾರ ಸಪ್ತಾಹ – 2024

## ಧ್ಯೇಯ : "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

## Theme: Role of Cooperatives in building "Viksit Bharat"

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇವರ ಮಾರ್ಗದರ್ಶನದಲ್ಲಿ ದೇಶಾದ್ಯಂತ ನವೆಂಬರ್ 14 ರಿಂದ ನವೆಂಬರ್ 20, 2024 ರವರೆಗೆ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬ ಧ್ಯೇಯದೊಂದಿಗೆ 7 ದಿನಗಳ ಪ್ರತ್ಯೇಕ ದಿನದ ವಿಷಯಗಳೊಂದಿಗೆ ರಾಜ್ಯದ ಎಲ್ಲಾ ಸಹಕಾರ ಸಂಸ್ಥೆಗಳು ಪರಿಣಾಮಕಾರಿಯಾಗಿ ಸಹಕಾರ ಸಪ್ತಾಹವನ್ನು ಆಚರಿಸಲು ಈ ಮೂಲಕ ಕೋರಿದೆ.

| 7 ದಿನಗಳ ಆಚರಣೆಯ ಶೀರ್ಷಿಕೆಗಳು | |
|---|---|
| 14.11.2024<br>ಗುರುವಾರ<br>ಬೆಂಗಳೂರು | Strengthening Cooperation Movement through New Initiatives of Ministry of Cooperation.<br>ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳವಳಿಯನ್ನು ಬಲಪಡಿಸುವುದು. |
| 15.11.2024<br>ಶುಕ್ರವಾರ<br>ಹುಬ್ಬಳ್ಳಿ | Innovation, Technology and Good Governance in Cooperatives.<br>ಸಹಕಾರ ಸಂಸ್ಥೆಗಳಲ್ಲಿ ಅನ್ವೇಷಣೆ, ತಾಂತ್ರಿಕತೆ ಮತ್ತು ಉತ್ತಮ ಆಡಳಿತ |
| 16.11.2024<br>ಶನಿವಾರ<br>ಮಂಗಳೂರು | The Role of Cooperatives in Fostering Entrepreneurship, Employment and Skill Development.<br>ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ |
| 17.11.2024<br>ಭಾನುವಾರ<br>ಬಾಗಲಕೋಟೆ | Transforming Cooperative Enterprises.<br>ಸಹಕಾರಿ ಉದ್ಯಮಗಳಲ್ಲಿ ಪರಿವರ್ತನೆ |
| 18.11.2024<br>ಸೋಮವಾರ<br>ಬೀದರ್ | Strengthening Cooperation among Cooperatives.<br>ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು |
| 19.11.2024<br>ಮಂಗಳವಾರ<br>ಚಿಕ್ಕಮಗಳೂರು | Cooperatives for Women, Youth and Weaker Sections.<br>ಮಹಿಳೆಯರು, ಯುವಕರು ಮತ್ತು ಅಬಲವರ್ಗಗಳಿಗಾಗಿ ಸಹಕಾರ ಸಂಸ್ಥೆಗಳು |
| 20.11.2024<br>ಬುಧವಾರ<br>ಬೆಳಗಾವಿ | Role of Cooperatives in Achieving SDGs and way forward for Better World.<br>ಉತ್ತಮ ವಿಶ್ವ ನಿರ್ಮಾಣ ಹಾದಿಗಾಗಿ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ |

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಶ್ರೀ ವಿ. ರಾಜು
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ನಿರ್ದೇಶಕರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೇಪ್ಪ ಎಂ. ಆಲಗೂರ
ನಿರ್ದೇಶಕರು



ಶ್ರೀ ಗುರುಪಾದಪ್ಪಗೌಡ ಬ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು




ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



**ವಿ. ರಾಜು**

**ಅಧ್ಯಕ್ಷರು**

**"ವಿಕಸಿತ ಭಾರತ" ಪರಿಕಲ್ಪನೆಯು 2047ರ ವೇಳೆಗೆ ಭಾರತ ಸ್ವಾತಂತ್ರ್ಯೋತ್ಸವದ ಶತಮಾನೋತ್ಸವ ಹಿನ್ನಲೆಯಲ್ಲಿ ಬಲಿಷ್ಠ ರಾಷ್ಟ್ರವಾಗಿ ರೂಪುಗೊಂಡು 30 ಟ್ರಿಲಿಯನ್ ಆರ್ಥಿಕತೆ ಹೊಂದಬೇಕೆಂಬ ಆಶಯವನ್ನು ಕೇಂದ್ರ ಸರ್ಕಾರ ಇರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳು ತಮ್ಮ ಸೇವೆಗಳನ್ನು ಪರಿಣಾಮಗೊಳಿಸಬೇಕಿದೆ. ಪ್ರತಿವರ್ಷ ಜನಸಂಖ್ಯೆ ಹೆಚ್ಚುತ್ತಲೇ ಇದೆ. ಎಲ್ಲಾ ಜನರಿಗೆ ಆಹಾರ ಉತ್ಪಾದನೆಯ ಮೂಲಕ ಆಹಾರ ಭದ್ರತೆಗೆ ಒತ್ತು ನೀಡಬೇಕಿದೆ.**

# ಅಖಿಲ ಭಾರತ ಸಹಕಾರ ಸಪ್ತಾಹ : ಯಶಸ್ವಿಯಾಗಲಿ, ಪರಿಣಾಮಕಾರಿಯಾಗಿರಲಿ

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ, ಇವರ ಮಾರ್ಗದರ್ಶನದಲ್ಲಿ ಈ ವರ್ಷ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು "ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ಎಂಬ ಧ್ಯೇಯದೊಂದಿಗೆ ಏಳು ದಿನಗಳ ಕಾಲ ಏಳು ಪ್ರಮುಖ ವಿಷಯಗಳೊಂದಿಗೆ ಆಚರಿಸಲಾಗುತ್ತದೆ.

ಸಹಕಾರ ಸಪ್ತಾಹವು ಸಹಕಾರಿಗಳ ಪಾಲಿಗೆ ಹಬ್ಬವಿದ್ದಂತೆ, ಭಾರತದ ಸಹಕಾರ ಚಳುವಳಿ ವಿಶ್ವದಲ್ಲಿಯೇ ಅಗ್ರಸ್ಥಾನದಲ್ಲಿದೆ. ದೇಶದಲ್ಲಿ 8.50 ಲಕ್ಷ ಸಹಕಾರ ಸಂಘಗಳಿದ್ದು, ಅಂದಾಜು 30 ಕೋಟಿಗೂ ಅಧಿಕ ಸದಸ್ಯರಿದ್ದಾರೆ. ಕರ್ನಾಟಕ ರಾಜ್ಯವು 47 ಸಾವಿರ ವಿವಿಧ ರೀತಿಯ ಸಹಕಾರ ಸಂಘಗಳನ್ನು ಹೊಂದಿದ್ದು 2.60 ಕೋಟಿ ಸದಸ್ಯರಿಗೆ ಸೇವೆಗಳನ್ನು ವಿಸ್ತರಿಸುತ್ತಾ ಪರಿಣಾಮಕಾರಿ ಸೇವೆ ಸಲ್ಲಿಸುತ್ತಿದೆ.

ರಾಜ್ಯದಲ್ಲಿ ಪ್ರಸ್ತುತ ಆರೂವರೆ ಕೋಟಿ ಜನ ಸಂಖ್ಯೆ ಇದೆ. ಈಗಿನ ಅಂಕಿ ಅಂಶಗಳನ್ನು ಗಮನಿಸಿದಾಗ ಸಹಕಾರ ಕ್ಷೇತ್ರ ಮತ್ತಷ್ಟು ವಿಸ್ತರಿಸಿಕೊಳ್ಳಬೇಕಾದ ಅಗತ್ಯವಿದೆ. ಇದು ಭಾರತದ ಬೆಳವಣಿಗೆಗೆ ಪೂರಕವಾಗಲಿದೆ.

"ವಿಕಸಿತ ಭಾರತ" ಪರಿಕಲ್ಪನೆಯು 2047ರ ವೇಳೆಗೆ ಭಾರತ ಸ್ವಾತಂತ್ರ್ಯೋತ್ಸವದ ಶತಮಾನೋತ್ಸವ ಹಿನ್ನೆಲೆಯಲ್ಲಿ ಬಲಿಷ್ಠ ರಾಷ್ಟ್ರವಾಗಿ ರೂಪುಗೊಂಡು 30 ಟ್ರಿಲಿಯನ್ ಆರ್ಥಿಕತೆ ಹೊಂದಬೇಕೆಂಬ ಆಶಯವನ್ನು ಕೇಂದ್ರ ಸರ್ಕಾರ ಇರಿಸಿಕೊಂಡಿದೆ.

ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳು ತಮ್ಮ ಸೇವೆಗಳನ್ನು ಪರಿಣಾಮಗೊಳಿಸಬೇಕಿದೆ. ಪ್ರತಿವರ್ಷ ಜನಸಂಖ್ಯೆ ಹೆಚ್ಚುತ್ತಲೇ ಇದೆ. ಎಲ್ಲಾ ಜನರಿಗೆ ಆಹಾರ ಉತ್ಪಾದನೆಯ ಮೂಲಕ ಆಹಾರ ಭದ್ರತೆಗೆ ಒತ್ತು ನೀಡಬೇಕಿದೆ. ಕೃಷಿ ಪತ್ತು, ಕೃಷಿಯೇತರ ಪತ್ತು, ಬ್ಯಾಂಕಿಂಗ್, ಹೈನುಗಾರಿಕೆ, ಕುಕ್ಕುಟ, ಮೀನುಗಾರಿಕೆ, ಕಾರ್ಮಿಕ, ಶಿಕ್ಷಣ, ತರಬೇತಿ ಕೌಶಲ್ಯಯುತ ಉದ್ಯೋಗ ಸೃಷ್ಠಿ, ತಂತ್ರಜ್ಞಾನ, ಮಾರಾಟ, ಸಂಸ್ಕರಣೆ, ರೂಪಾಂತರ ವಲಯಗಳು ಸೇರಿದಂತೆ ಸಹಕಾರ ಕ್ಷೇತ್ರದ ಎಲ್ಲಾ ವಲಯಗಳನ್ನು ಒಳಗೊಂಡು ಆರ್ಥಿಕ ಅಭಿವೃದ್ದಿ ಜೊತೆಗೆ ಸುಸ್ಥಿರ ಅಭಿವೃದ್ದಿಗೆ ಹೆಚ್ಚು ಒತ್ತು ನೀಡಬೇಕಾಗಿದೆ.

ಈ ನಿಟ್ಟಿನಲ್ಲಿ ಸಹಕಾರ ಸಂಘಗಳ ಸ್ಥಾಪನೆಯ ಜೊತೆಗೆ ಯುವಜನರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಚಳುವಳಿಯಲ್ಲಿ ಪಾಲ್ಗೊಂಡು ದೇಶದ ಅಭಿವೃದ್ದಿಗೆ ಕೊಡುಗೆ ನೀಡಬೇಕಿದ್ದು ನಮ್ಮ ಚಿಂತನೆಗಳು ಅಭಿವೃದ್ಧಿಯ ಕಡೆಗೆ ಸಾಗಲಿ ಎಂದು ಆಶಿಸೋಣ.

ನವೆಂಬರ್–1, ಕನ್ನಡ ರಾಜ್ಯೋತ್ಸವ ಹಾಗೂ ನವೆಂಬರ್–14 ರಿಂದ 20ರವರೆಗೆ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಗೆ ಪತ್ರಿನ ಮಹಾಮಂಡಳ ಶುಭಾಶಯಗಳನ್ನು ಸಲ್ಲಿಸುತ್ತದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ


ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**
ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**
ಸದಸ್ಯರು : **ಡಾ|| ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜೆ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**
ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ




ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘ, ಸೂಳೆಭಾವಿ, ಬಾಗಲಕೋಟೆ, ಶ್ರೀ ಕಾಳಿಕಾದೇವಿ ಪತ್ತಿನ ಸಹಕಾರ ಸಂಘ ನಿ., ಜಮಖಂಡಿ, ಬಾಗಲಕೋಟೆ, ನೇಕಾರರ ಪತ್ತಿನ ಸಹಕಾರ ಸಂಘ ನಿ., ಬಾಗಲಕೋಟೆ ಈ ಸಹಕಾರ ಸಂಘಗಳ ಪ್ರತಿನಿಧಿಗಳು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ.ರಾಜುರವರಿಗೆ ಶಿಕ್ಷಣ ನಿಧಿ ನೀಡಿದ ಸಂದರ್ಭ

**ಸುಭಾಷಿತ :** ಮನುಷ್ಯ ಚಂದ್ರಮಂಡಲಕ್ಕೆ ಹೋಗಿ ಬಂದರೂ ಕ್ಷುದ್ರಬುದ್ಧಿ, ಅಂಧಶ್ರದ್ಧೆ ಮೀರಲು ಸಾಧ್ಯವಾಗಿಲ್ಲ. – ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

## 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ದತಾ ಸಭೆ

### ನವೆಂಬರ್ 14 ರಿಂದ 20 ರವರೆಗೆ ಸಹಕಾರ ಸಪ್ತಾಹ ಆಚರಣೆ

# ಸಹಕಾರ ಸಪ್ತಾಹವನ್ನು ಪರಿಣಾಮಕಾರಿಯಾಗಿ ಆಚರಿಸಲು ಸಹಕಾರ ಸಚಿವ ಕೆ.ಎನ್. ರಾಜಣ್ಣ ಕರೆ



**ಬೆಂಗಳೂರು :** ಭಾರತ ದೇಶದ ಪ್ರಥಮ ಪ್ರಧಾನಿ ಜವಹರಲಾಲ್ ನೆಹರೂರವರು ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆಯ ನೆನಪಿಗಾಗಿ ಅವರ ಹುಟ್ಟು ಹಬ್ಬದ ದಿನದಿಂದ 7 ದಿನಗಳ ಕಾಲ ನಮ್ಮ ರಾಷ್ಟ್ರದಲ್ಲಿ ಸಹಕಾರ ಸಪ್ತಾಹದ ಆಚರಣೆ ಆಗಲಿದೆ. ಇದಕ್ಕೆ ಸಹಕಾರಿಗಳೆಲ್ಲರೂ ಪಕ್ಷಾತೀತವಾಗಿ ಭಾಗವಹಿಸಿ, ಸಪ್ತಾಹದ ಅರ್ಥಪೂರ್ಣ ಆಚರಣೆಗೆ ಸಹಕರಿಸಬೇಕೆಂದು ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಕರೆ ನೀಡಿದರು. ಅವರು 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಸಹಕಾರ ಇಲಾಖೆ ಆಯೋಜಿಸಿದ್ದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕರ್ನಾಟಕದ ಸಹಕಾರ ವಲಯ ಉತ್ತಮ ಬೆಳವಣಿಗೆಯನ್ನು ಸಾಧಿಸಿದ್ದರೂ ಸಹ ಕೆಲವೊಂದು ಸಹಕಾರ ಸಂಸ್ಥೆಗಳಲ್ಲಿನ ಲೋಪದೋಷಗಳಿಂದ ಸಹಕಾರ ಕ್ಷೇತ್ರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಆದ್ದರಿಂದ ಶೀಘ್ರವಾಗಿ ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸಹಕಾರಿಗಳು ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಪ್ರಯತ್ನಿಸುವಂತೆ ತಿಳಿಸಿದರು.

ಸಹಕಾರ ಚಳವಳಿಯ ಪರಿಣಾಮಕಾರಿ ಬೆಳವಣಿಗೆಗೆ ಪೂರಕವಾಗಿ ಚಿಂತನಾ–ಮಂಥನ ನಡೆಸುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಡಿಸೆಂಬರ್ ತಿಂಗಳಿನಲ್ಲಿ ಕೆ.ಹೆಚ್. ಪಾಟೀಲರ ಶತಮಾನೋತ್ಸವ ಆಚರಣೆಯ ಭಾಗವಾಗಿ ರಾಷ್ಟ್ರೀಯ ಸಹಕಾರ ಸಮ್ಮೇಳನ ಆಯೋಜನೆ ಮಾಡಲು ಚಿಂತಿಸಲಾಗಿದೆ. ಈ ಒಂದು ಕಾರ್ಯಕ್ರಮಕ್ಕೆ ಸಹಕಾರಿಗಳೆಲ್ಲರೂ ತಮ್ಮ ಸಲಹೆಗಳನ್ನು ನೀಡಿ, ಸಹಕರಿಸುವಂತೆ ತಿಳಿಸಿದರು.

ಸಹಕಾರ ರತ್ನ ಪ್ರಶಸ್ತಿಯನ್ನು ಕುರಿತಂತೆ ಮಾತನಾಡಿದ ಸಚಿವರು ಸಹಕಾರ ರತ್ನ ಪ್ರಶಸ್ತಿಯನ್ನು ಸಹಕಾರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಅರ್ಹ ಸಹಕಾರಿಗಳಿಗೆ ನೀಡಲು ಮುಂದಿನ ದಿನಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.







ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು ಮಾತನಾಡಿ, ಕರ್ನಾಟಕದ ಸಹಕಾರ ಚಳವಳಿಯ ಬೆಳವಣಿಗೆಯ ಮಾರ್ಗದರ್ಶಕರಾಗಿ ಇಂದು ಅನುಭವಿ ಹಾಗೂ ಹಿರಿಯ ಸಹಕಾರಿಗಳಾದ ಕೆ.ಎನ್. ರಾಜಣ್ಣನವರು ಸಹಕಾರ ಸಚಿವರಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.

ಸಹಕಾರ ಸಚಿವರ ನೇತೃತ್ವದಲ್ಲಿ ಸಹಕಾರ ಸಪ್ತಾಹವನ್ನು ನಾವು ಹಬ್ಬದಂತೆ ಅರ್ಥಪೂರ್ಣವಾಗಿ ಆಚರಿಸೋಣ. ಸಹಕಾರ ಸಪ್ತಾಹದ ಸಂದರ್ಭದಲ್ಲಿ ಪ್ರತಿಯೊಂದು ಸಹಕಾರ ಸಂಘದ ಕಟ್ಟಡದ ಮೇಲೆ ಸಹಕಾರ ಧ್ವಜ ಹಾರಾಡಬೇಕು. ಈ ಮೂಲಕ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಯಶಸ್ಸಿಗೆ ಕೈಜೋಡಿಸಿ ಎಂದು ಮನವಿ ಮಾಡಿದರು.ಸಭೆಯಲ್ಲಿ ಉಪಸ್ಥಿತರಿದ್ದ ಸಹಕಾರಿಗಳನ್ನು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್ ಅವರು ಸ್ವಾಗತಿಸಿ, ಮಹಾಮಂಡಳದ ಕಾರ್ಯಚಟುವಟಿಕೆಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಭೆಯಲ್ಲಿ ಬಾಗಲಕೋಟೆ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಅಜಯ್‌ಕುಮಾರ್ ಸರ್‌ನಾಯಕ್, ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಎಂ.ಎನ್. ರಾಜೇಂದ್ರಕುಮಾರ್, ಕೆ.ಓ.ಎಫ್. ಅಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಶಾಸಕರು ಹಾಗೂ ಕಾಸ್ಕಾರ್ಡ್ ಬ್ಯಾಂಕಿನ ಅಧ್ಯಕ್ಷರಾದ ಕೆ. ಷಡಕ್ಷರಿ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ವಿ. ರಾಜು, ಮಹಿಳಾ ಮಹಾಮಂಡಳದ ಅಧ್ಯಕ್ಷರಾದ ಶಕುಂತಲಾ ಕೆ. ಬೆಲ್ದಾಳೆ, ಸಹಕಾರ ಸಂಘಗಳ ನಿಬಂಧಕರಾದ ಟಿ.ಹೆಚ್.ಎಂ. ಕುಮಾರ್, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಜಿ.ಎಸ್. ರಮಣರೆಡ್ಡಿ, ಮಹಾಮಂಡಳದ ಕಾರ್ಯದರ್ಶಿ ಲಕ್ಷ್ಮಿಪತಯ್ಯ, ರಾಜ್ಯಮಟ್ಟದ ಸಹಕಾರ ಸಂಸ್ಥೆಗಳ ಅಧ್ಯಕ್ಷರುಗಳು, ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರು, ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು, ರಾಜ್ಯದ ಹಾಲು ಒಕ್ಕೂಟಗಳ ಅಧ್ಯಕ್ಷರುಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮಹಾಮಂಡಳದ ಅಧಿಕಾರಿಗಳು ಉಪಸ್ಥಿತರಿದ್ದರು.









# 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್ ಸಲಹೆ



**ಬೆಂಗಳೂರು :** ಕರ್ನಾಟಕ ರಾಜ್ಯದಾದ್ಯಂತ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಪರಿಣಾಮಕಾರಿಯಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸುವಂತೆ ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್ ಅವರು ಸಹಕಾರಿಗಳಲ್ಲಿ ಮನವಿ ಮಾಡಿದರು ಹಾಗೂ ಸಹಕಾರ ಇಲಾಖಾಧಿಕಾರಿಗಳು ಕಾರ್ಯಕ್ರಮದ ಯಶಸ್ಸಿಗೆ ಮಾರ್ಗದರ್ಶನ ನೀಡಲು ಅವರು ಸಲಹೆ ಮಾಡಿದರು.

ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ನಿಬಂಧಕರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಸಹಕಾರ ಸಪ್ತಾಹ ಕಾರ್ಯಕ್ರಮಗಳ ಆಯೋಜಕ ಸಂಸ್ಥೆಗಳು ಮತ್ತು ಹಿರಿಯ ಅಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಸಹಕಾರಿ ಯೂನಿಯನ್, ನವದೆಹಲಿ ಅವರು ಪ್ರಕಟಿಸಿರುವ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದ ಧ್ಯೇಯ ಮತ್ತು 7 ದಿನಗಳ ಪ್ರಮುಖ ವಿಷಯಗಳ ಕುರಿತು ತಜ್ಞ, ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸಿ, ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕ ವಾತಾವರಣ ಹಾಗೂ ಅಗತ್ಯ ಮಾಹಿತಿಗಳನ್ನು ಒದಗಿಸಲು ಏರ್ಪಾಡು ಮಾಡಲು ಸಹಕಾರ ಇಲಾಖಾಧಿಕಾರಿಗಳಿಗೆ ಸಲಹೆ ಮಾಡಿದರು.

ಬಾಗಲಕೋಟೆ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಅಜಯಕುಮಾರ್ ಸರನಾಯಕ್, ಸಹಕಾರ ಮಹಾಮಂಡಳದ ನಿರ್ದೇಶಕರಾದ ಎ.ಸಿ. ನಾಗರಾಜ್, ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ರುದ್ರೇಗೌಡ, ಜಿಲ್ಲಾ ಸಹಕಾರ ಯೂನಿಯನ್ನುಗಳ ಅಧ್ಯಕ್ಷರುಗಳು, ಕೆ.ಎಂ.ಎಫ್. ವ್ಯವಸ್ಥಾಪಕ ನಿರ್ದೇಶಕರಾದ ಜಗದೀಶ್, ಸಹಕಾರ ಸಂಘಗಳ ಅಪರ ನಿಬಂಧಕರುಗಳಾದ ಕೆ.ಎಸ್. ನವೀನ್, ವೈ. ಹೆಚ್. ಗೋಪಾಲಕೃಷ್ಣ, ಹೆಚ್. ಬಾಲಶೇಖರ್, ಲಕ್ಷ್ಮೀಪತಯ್ಯ, ನೀಲಪ್ಪ ಸಿದ್ದಣ್ಣವರ್, ಗುರುಸ್ವಾಮಿ, ಬೆಂಗಳೂರು ಪ್ರಾಂತ್ಯ ಜಂಟಿ ನಿಬಂಧಕರಾದ ಅಶ್ವಥನಾರಾಯಣ, ಬೆಳಗಾವಿ ಪ್ರಾಂತ್ಯ ಜಂಟಿ ನಿಬಂಧಕರಾದ ಡಾ. ಎಸ್. ಸುರೇಶ್‌ಗೌಡ, ಕಲಬುರಗಿ ಪ್ರಾಂತ್ಯ ಜಂಟಿ ನಿಬಂಧಕರಾದ ವಿಶ್ವನಾಥ ಮಲಕೂಡ ರವರು ಸೇರಿದಂತೆ ಡಿಸಿಸಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳು, ಜಂಟಿ ನಿಬಂಧಕರುಗಳು, ಉಪನಿಬಂಧಕರುಗಳು, ವಿವಿಧ ಸಹಕಾರ ಮಹಾಮಂಡಳಗಳ ಅಧಿಕಾರಿಗಳು ಉಪಸ್ಥಿತರಿದ್ದರು.



## ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 10ನೇ ಶಾಖೆ ಆರಂಭ




**ಉಳ್ಳಾಲ :** ಬಿ.ಸಿ. ರೋಡ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಬಂಟ್ವಾಳ ಕಥೋಲಿಕ್ ಕ್ರೆಡಿಟ್ ಸಹಕಾರಿ ಸಂಘದ 10ನೇ ಶಾಖೆ ಫಜೀರು ಗ್ರಾಮದ "ಆಶೀರ್ವಾದ್ ಕಾಂಪ್ಲೆಕ್ಸ್"ನ ಮೊದಲನೇ ಮಹಡಿಯಲ್ಲಿ ಉದ್ಘಾಟನೆಗೊಂಡಿತು.

ಮರ್ಸಿ ಶೇರ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಿ.ಎ. ಮ್ಯಾಕ್ಸಿಮ್ ಎಂ..ಫೆರ್ನಾಂಡಿಸ್ ಉದ್ಘಾಟಿಸಿದರು. ಚರ್ಚ್ ಧರ್ಮಗುರು ಫಾ। ಆಲ್ಬನ್ ಡಿಸೋಜ ಆಶೀರ್ವಚನ ನೀಡಿದರು. ಹರೇಕಳ ರಾಮಕೃಷ್ಣ ಪ್ರೌಢಶಾಲೆಯ ನಿವೃತ್ತ ಶಿಕ್ಷಕ ಕೆ.ರವೀಂದ್ರ ರೈ ಭದ್ರತಾ ಕೊಠಡಿ ಉದ್ಘಾಟಿಸಿದರು. ಫಜೀರು ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಫ್ಲೋರಿನ್ ಡಿಸೋಜ ಗಣಕಯಂತ್ರ ಉದ್ಘಾಟಿಸಿದರು.

ಫಜೀರು ಚರ್ಚ್ ಪಾಲನಾ ಮಂಡಳಿ ಉಪಾಧ್ಯಕ್ಷ ವಲೇರಿಯನ್ ಡಿಸೋಜ, ಕಟ್ಟಡ ಮಾಲೀಕ ಗ್ಲೆನ್ಸಿಲ್ ಅರುಣ್ ರೋಚ್ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷ ಜೀವನ್ ಲೋಯ್ಡ್ ಪಿಂಟೊ ಅಧ್ಯಕ್ಷತೆ ವಹಿಸಿದ್ದರು. ನೂತನ ಶಾಖೆಗೆ ರೂ. 1.10 ಕೋಟಿ ಠೇವಣಿ ಸಂಗ್ರಹಗೊಂಡಿದ್ದು, ಅತಿಥಿ ಗಣ್ಯರ ಸಮ್ಮುಖದಲ್ಲಿ ಠೇವಣಿ ಪತ್ರಗಳನ್ನು ಠೇವಣಿದಾರರಿಗೆ ವಿತರಿಸಲಾಯಿತು.



ಬೆಂಗಳೂರಿನ ಕೌಟಿಲ್ಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ನೂತನ ಕಟ್ಟಡ "ಸಹಕಾರ ಸಂಭ್ರಮ"ವನ್ನು ಶಾಸಕ ಶ್ರೀ ಎಲ್.ಎ. ರವಿಸುಬ್ರಮಣ್ಯ ಉದ್ಘಾಟಿಸಿದರು. ಸಂಘದ ಅಧ್ಯಕ್ಷರಾದ ಕೆ.ಪಿ. ಶಿವಸ್ವಾಮಿ, ಉಪಾಧ್ಯಕ್ಷರಾದ ಕೃಷ್ಣ ಜಿ ಪುರೋಹಿತ್ ಆಡಳಿತಮಂಡಳಿ ಸದಸ್ಯರುಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಜ್ಯೋತಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಪತ್ತಿನ ಮಹಾಮಂಡಳದ ನಿರ್ದೇಶಕರಾದ ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿರವರಿಗೆ ಶಿಕ್ಷಣ ನಿಧಿ ವಂತಿಗೆಯ ಚೆಕ್ಕನ್ನು ನೀಡಿದ ಸಂದರ್ಭ

# ಕರ್ನಾಟಕ ಸುವರ್ಣ ಮಹೋತ್ಸವ ಅವಲೋಕನಕ್ಕೆ ಸಕಾಲ

▸▸ ಡಾ. ಗುರುರಾಜ ಪೋಶೆಟ್ಟಿಹಳ್ಳಿ, ಬೆಂಗಳೂರು

**ಏಕೀಕೃತ ಕನ್ನಡನಾಡು ಕರ್ನಾಟಕ ಎನ್ನುವ ಹೆಸರನ್ನು ಪಡೆದ ಸಂದರ್ಭದಲ್ಲಿ, ನಾಡು–ನುಡಿಗೆ ಸಂಬಂಧಿಸಿದಂತೆ ಅನೇಕ ಕನಸುಗಳನ್ನು ಜನಮಾನಸದಲ್ಲಿ ಚಿತ್ತಲಾಗಿತ್ತು. ನಾಡಿನ ಅಮೂಲ್ಯ ಪ್ರಾಕೃತಿಕ ಸಂಪತ್ತನ್ನು ಸಂರಕ್ಷಿಸುವುದು ಹಾಗೂ ಆ ಸಂಪತ್ತನ್ನು ನಾಡವರ ಹಿತಕ್ಕೆ ಬಳಸಿಕೊಳ್ಳುವ ಮೂಲಕ ಆಧುನಿಕ ಕರ್ನಾಟಕವನ್ನು ಕಟ್ಟುವ ಹಂಬಲ 'ಕರ್ನಾಟಕ ನಾಮಕರಣ'ದ ಆಶಯಗಳಲ್ಲೊಂದಾಗಿತ್ತು. ಹಾಗೆಯೇ, ಕರ್ನಾಟಕದ ಬಹುತ್ವ ಪರಂಪರೆಯ ಅನನ್ಯತೆಯನ್ನು ಸಂರಕ್ಷಿಸಿಕೊಂಡು, ಭಾರತ ಒಕ್ಕೂಟದ ಸಾರ್ವಭೌಮತ್ವವನ್ನು ಎತ್ತಿಹಿಡಿಯುವ ದಿಸೆಯಲ್ಲಿ ನಾಡನ್ನು ಸಜ್ಜುಗೊಳಿಸುವ ಆಕಾಂಕ್ಷೆಯೂ ಇತ್ತು. ಕಳೆದ ಐವತ್ತು ವರ್ಷಗಳಲ್ಲಿ ಈ ಆಶಯ ಎಷ್ಟರಮಟ್ಟಿಗೆ ಸಾಕಾರಗೊಂಡಿದೆ ಎನ್ನುವುದರ ಅವಲೋಕನ 'ಕರ್ನಾಟಕ ಸುವರ್ಣ ಮಹೋತ್ಸವ' ಸಂದರ್ಭದಲ್ಲಿ ನಡೆಯಬೇಕಾಗಿದೆ.**

ಕನ್ನಡ ಮಾತನಾಡುವ ಜನರೆಲ್ಲರೂ ಒಂದೇ ಆಡಳಿತಕ್ಕೆ ಒಳಪಟ್ಟ ಸಂದರ್ಭವನ್ನು ರಾಜ್ಯೋತ್ಸವದ ನೆಪದಲ್ಲಿ ಪ್ರತಿ ವರ್ಷ ನೆನಪಿಸಿಕೊಳ್ಳುವ ಸಂಪ್ರದಾಯಕ್ಕೆ ಇದೀಗ ಐವತ್ತು ವರ್ಷಗಳು ಸಂದಿವೆ. ಏಕೀಕರಣಗೊಂಡ ಕರ್ನಾಟಕದ ಸ್ಥಿತಿ – ಗತಿಗಳನ್ನು ಕುರಿತು ನಾವಿಂದು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಕನ್ನಡಿಗರನ್ನು ಭಾವನಾತ್ಮಕವಾಗಿ ಬೆಸೆಯುವ ಕಾರ್ಯ ಪ್ರಸ್ತುತದ ತುರ್ತು ಅಗತ್ಯವೆನಿಸುತ್ತದೆ.

ಮೈಸೂರು ರಾಜ್ಯವನ್ನು ಕರ್ನಾಟಕವೆಂದು ಕರೆದ ಚಾರಿತ್ರಿಕ ವಿದ್ಯಮಾನಕ್ಕೆ ಐವತ್ತು ವರ್ಷಗಳು ತುಂಬಿರುವ ಸಂದರ್ಭ ನಾಡಿನುದ್ದಕ್ಕೂ ಸಹಜವಾಗಿಯೇ ಸಂಭ್ರಮದ ತರಂಗಗಳನ್ನು ಉಂಟುಮಾಡಿದೆ. ಕನ್ನಡ ನಾಡಿಗೆ 'ಕರ್ನಾಟಕ' ಎಂದು ಹೆಸರಿಟ್ಟಿದ್ದು ಮಗುವೊಂದಕ್ಕೆ ನಾಮಕರಣ ಮಾಡಿದಷ್ಟು ಸಲೀಸಾಗಿರಲಿಲ್ಲ. 1956ರಲ್ಲಿ ಕರ್ನಾಟಕ ಏಕೀಕರಣಗೊಂಡ ದಿನದಿಂದಲೂ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಕರೆಯಬೇಕೆನ್ನುವ ಅಭಿಪ್ರಾಯ ವ್ಯಕ್ತವಾಗುತ್ತಲೇ ಇತ್ತು. ಆದರೆ, ಅಖಂಡ ಕರ್ನಾಟಕಕ್ಕೊಂದು ಅರ್ಥಪೂರ್ಣ ಹೆಸರು ಬೇಕೆನ್ನುವ ಕನ್ನಡ ಜನಪದದ ಅಪೇಕ್ಷೆ ಮೂರ್ತರೂಪಕ್ಕೆ ಬರಲು ಏಕೀಕರಣ ನಂತರದಲ್ಲಿ ಹದಿನೇಳು ವರ್ಷಗಳು ಬೇಕಾದವು. 1973ರ ನವೆಂಬರ್ 1ರಂದು, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ಅಧಿಕೃತವಾಗಿ ಕರೆಯಲಾಯಿತು.

ಮೈಸೂರು ರಾಜ್ಯ ಕರ್ನಾಟಕವಾಗಿ ರೂಪಾಂತರ ಗೊಳ್ಳಲಿಕ್ಕೆ ಹಲವು ಕಾರಣಗಳಿದ್ದವು. ಮೈಸೂರು ಎನ್ನುವ ಹೆಸರು ಒಂದು ಪ್ರಾಂತ್ಯದ ಹೆಸರನ್ನು ಸೂಚಿಸುವಂತಿತ್ತೇ ಹೊರತು ಸಮಗ್ರ ಕರ್ನಾಟಕವನ್ನು ಸಂಕೇತಿಸುವಂತಿರಲಿಲ್ಲ. ಏಕೀಕರಣದ ನಂತರ ಕನ್ನಡ ನುಡಿ ಮತ್ತು ಸಂಸ್ಕೃತಿಯ ನೆಲೆಗಟ್ಟಿನಲ್ಲಿ ರೂಪುಗೊಂಡಿದ್ದ ಕನ್ನಡನಾಡನ್ನು ಅಖಂಡವಾಗಿ ಗುರುತಿಸುವ ಹೆಸರಿಗಾಗಿ ಹುಡುಕಾಟ ನಡೆದೇ ಇತ್ತು. ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ಹೆಸರಿಸಬೇಕೆನ್ನುವ ಜನಸಾಮಾನ್ಯರ ಭಾವನೆಗಳಿಗೆ ಕನ್ನಡ ಚಳವಳಿಗಾರರು, ಲೇಖಕರು ಮತ್ತು ಪ್ರಾಜ್ಞ ರಾಜಕಾರಣಿಗಳು ಒತ್ತಾಸೆಯಾಗಿ ನಿಂತರು. ಆ ಒತ್ತಾಸೆ




ಮತ್ತು ಹೋರಾಟದ ಫಲವಾಗಿ, ಕರ್ನಾಟಕ ಎನ್ನುವ ಹೆಸರಿಗೆ ಶಾಸನಸಭೆಯ ಅಂಗೀಕಾರ ದೊರೆಯಿತು.

ಐವತ್ತೈದು ವರ್ಷಗಳು ಸಂದಿರುವ ಏಕೀಕರಣ ಕರ್ನಾಟಕದ ಇಂದಿನ ಸುವರ್ಣ ನಾಡಿಗೆ ಹಲವು ಆಸೆ–ಹತಾಶೆಗಳು ತುಂಬಿವೆ. ಏಕೀಕೃತಗೊಲ್ಲಬೇಕಾಗಿದ್ದ ಕನ್ನಡದ ಮನಸ್ಸುಗಳು ಹಲವು ಕಾರಣಗಳಿಗಾಗಿ ಮುರುಟಿಕೊಂಡಿವೆ. ಒಂದು ಪ್ರದೇಶದ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವಹಿಸಬೇಕಾದ ಆಡಳಿತ ಯಂತ್ರದಲ್ಲಿ ನಾಡು – ನುಡಿಯ ಬಗ್ಗೆ ಬದ್ಧತೆ ಕಾಣದಿದ್ದರೆ ಎಂಥ ಗೊಂದಲದ ಸ್ಥಿತಿ ತಲುಪಬೇಕಾಗುತ್ತದೆಂಬುದಕ್ಕೆ ಇಂದಿನ ಕರ್ನಾಟಕ ನಿದರ್ಶನ.

ಯಾವ ಕಾರಣಕ್ಕಾಗಿ ಹೋರಾಟ ನಡೆಸಿ ಏಕೀಕರಣ ಸಾಧ್ಯ ಮಾಡಲಾಯಿತೋ ಆ ಉದ್ದೇಶ ಇನ್ನೂ ಸಾಕಾರಗೊಂಡಿಲ್ಲ.

ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ನೆಲೆಸಿರುವ ನಾವೆಲ್ಲರೂ ಕನ್ನಡಿಗರೆಂಬ ಆತ್ಮಾಭಿಮಾನ ಮೂಡಬೇಕಾಗಿತ್ತು. ನೆರೆ – ಹೊರೆ ರಾಜ್ಯಗಳ ಪ್ರಭಾವ ನಮ್ಮ ಗಡಿ ಪ್ರದೇಶಗಳ ಮೇಲೆ ಇದ್ದರೂ ಅವುಗಳನ್ನು ಏಕತ್ರ ಬೆಸೆಯುವ ಪ್ರಯತ್ನ ಆಗಬೇಕಾಗಿತ್ತು. ಆದರೆ, ಈ ಹೊತ್ತಿಗೂ ಅದು ಸಾಧ್ಯವಾಗಲಿಲ್ಲ ಎಂಬುದು ವಿಷಾದದ ಸಂಗತಿಯಾಗಿದೆ.

ಮುಖ್ಯವಾಗಿ ಕರ್ನಾಟಕ ಉತ್ತರ – ದಕ್ಷಿಣ ಎಂದು ವಿಭಾಗವಾಗಿದೆ.

ಇದು ಎಷ್ಟು ದೊಡ್ಡ ಪ್ರಮಾಣದಲ್ಲಿ ಕಂದಕವನ್ನು ನಿರ್ಮಾಣ ಮಾಡಿದೆ ಎಂದರೆ, ನಮ್ಮ ನಾಡಿನ ಶ್ರೀಮಂತಿಕೆ ಪ್ರತೀಕವಾದ ಸಾಂಸ್ಕೃತಿಕ ವಲಯದಲ್ಲೂ ಅಸಮಧಾನ, ಅನುಮಾನಗಳು ಭುಗಿಲೇಳುವಂತೆ ಮಾಡಿದೆ. ಪ್ರಶಸ್ತಿಗಳು ಘೋಷಣೆಯಾದ ಸಂದರ್ಭದಲ್ಲಿಯೂ ಉತ್ತರಕ್ಕೆಷ್ಟು ದಕ್ಷಿಣಕ್ಕೆಷ್ಟು ಎಂಬ ಲೆಕ್ಕಚಾರಕ್ಕಿಳಿಯುತ್ತವೆ ನಮ್ಮ ಕನ್ನಡ ಮನಸ್ಸುಗಳು. ಕನಿಷ್ಠ ಪರಸ್ಪರ ಸಾಧಕರಲ್ಲಿ ಅಭಿಮಾನ ಮೂಡದಷ್ಟು ಅಸಮಧಾನದ ವಾತಾವರಣ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯನ್ನು ತೊಡೆದು ಹಾಕುವ ಪ್ರಯತ್ನವನ್ನು ಆಡಳಿತ ವ್ಯವಸ್ಥೆ ಮಾಡಬೇಕಾಗಿದೆ.

ಅಲ್ಲದೆ ಒಂದೂವರೆ ಸಾವಿರ ವರ್ಷಗಳಿಗೂ ಹೆಚ್ಚು ಭಾಷಿಕ, ಸಾಹಿತ್ಯಿಕ, ಪಾರಂಪರಿಕ ಇತಿಹಾಸವಿರುವ ಕನ್ನಡ ಭಾಷೆ ಮತ್ತು ಈ ನೆಲದ ಅಭಿವೃದ್ಧಿ ಭಾಷೆಯ ಬೆಳವಣಿಗೆಯ ಮೂಲಕ ಸಾಧ್ಯ ಎಂಬ ನಿಲುವು ಮುಂದಿನ ಎಲ್ಲಾ ವಿಚಾರಗಳು ಅದಕ್ಕೆ ಹೊಂದಿಕೊಳ್ಳುತ್ತವೆ. ಆದರೆ, ಯಾವುದೇ ಸಂದರ್ಭದಲ್ಲೂ ಭಾಷೆಯೊಡನೆ ಇತರ ವಿಷಯಗಳನ್ನು ತಳುಕು ಹಾಕುವ ಪ್ರಯತ್ನ ಮಾಡಬಾರದು. ಭಾಷೆಯೊಂದಕ್ಕೆ ತನ್ನದೇ ಆದ ಸಾಂಸ್ಕೃತಿಕ ಆಯಾಮವಿರುತ್ತದೆ.

ಕಳೆದ 50 ವಸಂತಗಳು ನಾಡಿನ ಭಾಷೆ, ನೆಲ, ಜಲ,ಕಲೆ, ಸಂಸ್ಕೃತಿ, ಸಾಹಿತ್ಯದ ಅಭಿವೃದ್ಧಿಗೆ ದೊರಕಿದ ಅವಧಿ ಬಹಳ ಸುದೀರ್ಘವೆಂದೇ ಹೇಳಬೇಕು. ಆದರೆ, ಕ್ಷೇತ್ರವಾರು ಪ್ರಗತಿ ನೋಡಿದರೆ ಸಾಕಷ್ಟು ನಿರಾಸೆಯುಂಟಾಗುತ್ತದೆ. ಕನ್ನಡಿಗರಾದ ನಾವು ನಿರಭಿಮಾನಿಗಲಾಗಿದ್ದೇವೇನೋ ಎಂಬ ಅನುಮಾನ ಕಾಡುತ್ತದೆ. "ಕನ್ನಡಕ್ಕಾಗಿ ಕೈ ಎತ್ತು; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು ಪಾಂಚಜನ್ಯ ಮೊಳಗುತ್ತದೆ" ಎಂಬ ಕುವೆಂಪು ಅವರ ಕವಿವಾಣಿಯನ್ನು ಅನುಸರಿಸಿ ಇಂದು ಕನ್ನಡಕ್ಕಾಗಿ ಕೈ ಎತ್ತುವ ; ಕೊರಳೆತ್ತುವ ಕನ್ನಡಿಗರು ಎಷ್ಟು ಮಂದಿ ಇದ್ದಾರೆ? "ಉದಯವಾಗಲಿ ಚಲುವ ಕನ್ನಡ ನಾಡು" ಎಂಬ ಹುಯಿಲಗೋಳ ನಾರಾಯಣರಾಯರ ಅನಿಸಿಕೆಗೆ ಅನುಗುಣವಾಗಿ ಈಗಿರುವ ನಮ್ಮ ನಾಡು ಚಲುವ ಕನ್ನಡ ನಾಡಾಗಿ ರೂಪುಗೊಂಡಿದೆಯೇ? ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಏಕೀಕೃತ ಕನ್ನಡ ನಾಡಿಗಾಗಿ ದುಡಿದ ಆಳವಾಡಿ ಶಿವಮೂರ್ತಿ, ಶಾಂತವೇರಿ ಗೋಪಾಲಗೌಡರು, ವೆಂಕಟರನ್ಗೊಕಟ್ಟಿ, ಬಿ.ವಿ.ಕಕ್ಕಿಲಾಯ, ಕೆ.ಆರ್.ಕಾರಾಂತಾರಂತಹ ಸಮಾಜವಾದಿ, ಕಮ್ಯುನಿಸ್ಟ್ ನಾಯಕರು, ಕಯ್ಯಾರ ಕಿಯ್ಯಣ್ಣರೈ, ಕೆಂಗಲ್ ಹನುಮಂತಯ್ಯನ ಮಹನೀಯರ ಶ್ರಮ ಮತ್ತು ಹೋರಾಟದ ನಾಡಿ ಮಿಡಿತ ನಮಗೆ ಇಂದು ಅರ್ಥವಾಗುತ್ತಿಲ್ಲ. ಈ ಸುದೀರ್ಘ ಅವಧಿಯಲ್ಲಿ ನಮ್ಮ ನಾಡು – ನುಡಿ ಎಷ್ಟು ಗಟ್ಟಿಗೊಂಡಿದೆ? ನಾವೆಷ್ಟು ಸುಭದ್ರರು ಎನ್ನುವ ಪ್ರಶ್ನೆಗಳಿಗೆ ಪೂರ್ಣ ವಿರಾಮ ದೊರಕಲಾರದು. "ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು, ಒಟ್ಟಿಗೆ ಬಾಳುವ ತೆರದಲಿ ಹರಸು" ಎಂಬ ಕವಿ ವಾಣಿಗೆ ಶತಮಾನಗಳು ಕಳೆದರೂ ಕನ್ನಡಿಗರ ನೈಜ ಸ್ವಭಾವವನ್ನು ಕೆಣಕುವಂತಿದೆ. ಗಡಿ ಮತ್ತು ಭಾಷಾ ಸಮಸ್ಯೆ ಇಂದಿಗೂ ನಮ್ಮ ಬೆನ್ನು ಬಿಡದೆ ಕಾಡುತ್ತಿವೆ. ಅನ್ಯ ಭಾಷಿಕರು ನಮ್ಮ ಭಾಷೆಯನ್ನೂ ನುಂಗಿ ಹಾಕಲು ಹೊಂಚು

**ಈ ಸಂದರ್ಭದಲ್ಲಿ ಬರಗೂರರು ಹೇಳಿರುವಂತೆ "ಜಗತ್ತಿನ ಪ್ರತಿಯೊಂದು ಭಾಷೆಗೂ ಇಂಥ ಸಂದಿಗ್ದ ಸ್ಥಿತಿ ಎದುರಾಗುತ್ತದೆ. ಇದರಿಂದ ಧೃತಿಗೆಡುವ ಅಗತ್ಯವಿಲ್ಲ" ಎಂಬ ಹೇಳಿಕೆಯಿಂದ ನಮ್ಮ ಭಾಷೆಯನ್ನೂ ಸಮರ್ಥವಾಗಿ ಕಟ್ಟಿಕೊಳ್ಳುವ ಸಂಕಲ್ಪವನ್ನು ಇನ್ದಿನ ಯುವ ಪೀಳಿಗೆ ಕೈಗೊಳ್ಳಬೇಕಾಗಿದೆ. ಇಂದಿನ ಕರ್ನಾಟಕವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಗೋಚರವಾಗುವ ನೈಜ ಸಮಸ್ಯೆಗಳ ಚಿತ್ರಣ ನಮ್ಮ ಮುಂದೆ ಈ ರೀತಿಯಾಗಿ ಅನಾವರಣಗೊಳ್ಳುತ್ತದೆ. ರೈತನ ಆತ್ಮಹತ್ಯೆಯಿಂದ ಹಿಡಿದು ಶಿಕ್ಷಣ, ಆರೋಗ್ಯದಂತ ಮೂಲಭೂತ ಸೌಕರ್ಯಗಳಿಲ್ಲದ ಧಾವಂತದಲ್ಲಿ ಶ್ರೀ ಸಾಮಾನ್ಯರು ಬದುಕನ್ನು ಕಟ್ಟಿಕೊಳ್ಳಲು ಪರದಾಡುತ್ತಿರುವುದು ಕಾಣಿಸುತ್ತದೆ. ಸೂಕ್ತ ಶಿಕ್ಷಣ ಪಡೆದಿದ್ದರೂ ನಿರುದ್ಯೋಗ ತಾಂಡವವಾಡುತ್ತಿರುವುದು, ಸಾಮಾಜಿಕ ಅಸಮಾನತೆ, ಅಶಾಂತಿಗಳು ನಮ್ಮ ನಾಡಿನ ವೈಶಿಷ್ಟ್ಯತೆಯನ್ನು ಜಾಗತಿಕ ಮತದಲ್ಲಿ ಮಸುಕು ಮಾಡುತ್ತಿವೆ.**

ಹಾಕುತ್ತಿರುವ ಈ ಹೊತ್ತಿನಲ್ಲೂ ನಮ್ಮನ್ನಾಳುವವರು ಕನ್ನಡತನವನ್ನು ಕಳೆದುಕೊಂಡಿರುವುದು ನೋವನ್ನು ತರಿಸುವಂತದ್ದಾಗಿದೆ.

ಕೊನೆಯದಾಗಿ ಹೇಳುವುದಾದರೆ ಭಾಷೆ ಬೆಳವಣಿಗೆಯ ಹಿನ್ನಲೆಯಲ್ಲಿ ಕೆಲವೊಂದು ಕಟ್ಟು ನಿಟ್ಟಾದ ಕ್ರಮಗಳನ್ನು ಅನುಸರಿಸ ಬೇಕಾಗುತ್ತದೆ. ಅವುಗಳಲ್ಲಿ ಏಕರೂಪ ಶಿಕ್ಷಣ ಪದ್ಧತಿ, ಪ್ರಾಥಮಿಕ ಶಿಕ್ಷಣ ಕನ್ನಡದಲ್ಲೇ ನೀಡುವುದು. ಹೊರ ಭಾಗದಿಂದ ಬಂದ ಅಧಿಕಾರಿಗಳು ಕನ್ನಡದಲ್ಲೇ ವ್ಯವಹರಿಸುವುದು. ಇವರ ಜತೆಗೆ ಡಿ.ಆರ್. ನಾಗರಾಜ್ ಅವರು ಹೇಳಿರುವಂತೆ "ಕನ್ನಡ ಭಾಷೆ ಕನ್ನಡ ನಾಡಿನಲ್ಲಿ ತೀವ್ರವಾಗಿ ಅಂತರ್ಮುಖಿಯಾಗಿ ಬೆಳೆಯಬೇಕು" ಎಂಬ ಸಲಹೆ ಪ್ರಸ್ತುತವೆನಿಸುತ್ತದೆ. ಇದಕ್ಕಿಂತ ಮುಖ್ಯವಾಗಿ ವೈದ್ಯಕೀಯ ತಾಂತ್ರಿಕ ವಿಜ್ಞಾನವನ್ನು ಕಲಿಸುವ ಕಸುವು ಕನ್ನಡಕ್ಕಿದೆ ಎಂಬುದನ್ನು ತೋರಿಸಿ ಕೊಡುವುದು. ಕನ್ನಡ ನೆಲದಲ್ಲಿ ಸ್ಥಾಪಿತವಾಗಿರುವ ಐ.ಟಿ – ಬಿ.ಟಿ. (I.T-B.T ) ಕಂಪನಿಗಳು ಕನ್ನಡಿಗರಿಗೆ ಉದ್ಯೋಗವಕಾಶ ನೀಡಿ ತನ್ನ ಬದ್ಧತೆಯನ್ನು ತೋರಿಸುವುದು. ಕೇಂದ್ರದಲ್ಲಿ ಹೆಚ್ಚಿನ ರಾಜಕೀಯ ಅಧ್ಧಿಕಾರವನ್ನು ಪಡೆಯುವ ಮೂಲಕ ನಮ್ಮ ನಾಡಿಗೆ ನ್ಯಾಯಯುತವಾಗಿ ದಕ್ಕಬೇಕಾದ ಎಲ್ಲಾ ಸೌಲಭ್ಯಗಲನ್ನು ತರುವ ಪ್ರಯತ್ನವಾಗಬೇಕಾಗಿದೆ. ಈ ರೀತಿಯಾಗಿ ನಾವು ಕನ್ನಡವನ್ನು ಉಳಿಸುವ, ಬೆಳೆಸುವ ಕಾರ್ಯಕ್ಕೆ ಕಟಿಬದ್ದರಾಗಬೇಕಾಗಿದೆ. ಆಗ ಮಾತ್ರ ಕುವೆಂಪು ಅವರು ಹೇಳಿರುವ "ಕನ್ನಡವೆನೆ ಕುಣಿದಾಡುವುದೆನ್ನದೆ ಕನ್ನಡವೆನೆ ಕಿವಿ ನಿಮಿರುವುದು" ಎಂಬ ಹೃದಯಾಂತರಾಳದ ಅಭಿಮಾನದ ನುಡಿ ಕನ್ನಡಿಗರ ಅಭಿಮಾನವಾಗಿ ಮೈ ದಾಳನೀ ಬೇಕಾಗಿದೆ. ಎಲ್ಲಾದರೂ ಇರು, ಹೇಗಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬುದನ್ನು ಅಕ್ಷರಶಃ ನಮ್ಮೆಲ್ಲರ ಬಾಳಿನಲ್ಲಿ ರೂಡಿಸಿಕೊಳ್ಳೋಣ.

"ಸಿರಿಗನ್ನಡಂ ಗೆಲ್ಗೆ – ಸಿರಿಗನ್ನಡಂ ಬಾಳ್ಗೆ"

**– ಜೈ ಹಿಂದ್ – ಜೈ ಕರ್ನಾಟಕ**

71ನೇ ಅಖಿಲ ಭಾರತ ಸಹಕಾರ ಸಪ್ತಾಹ

# ಸಹಕಾರ ಮತ್ತು 'ವಿಕಸಿತ ಭಾರತ'

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) ಬೆಂಗಳೂರು.



'ಸಹಕಾರ ದಿಂದ ಸಮೃದ್ಧಿ' ಎಂಬುದು ಭಾರತ ಸರ್ಕಾರದ ಸಹಕಾರ ಇಲಾಖೆಯ ಧ್ಯೆಯ ವ್ಯಾಕ್ಯ. ಸಹಕಾರ ಮಾರ್ಗ ಆರ್ಥಿಕ ಅಭ್ಯುದಯ ಅಷ್ಟೇ ಅಲ್ಲದೆ ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆ. ಭಾರತ 2047ಕ್ಕೆ ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸಲಿದೆ. ಅಷ್ಟರಲ್ಲಿ ವಿಶ್ವದಲ್ಲಿ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕು. ನಮ್ಮ ಈಗಿನ ಆರ್ಥಿಕತೆ 3.4 ಟ್ರಿಲಿಯನ್ ಡಾಲರ್ ಆರ್ಥಿಕತೆ ಇದ್ದು ಅದು 30 ಟ್ರಿಲಿಯನ್ ಡಾಲರ್ ಆರ್ಥಿಕತೆ ತಲುಪ ಬೇಕೆಂಬುದು ಇದರ ಸದಾಶಯ. ಭಾರತದ ಪ್ರತಿ ಪ್ರಜೆಗೂ ಮೂಲಭೂತ ಅಗತ್ಯತೆ ಮತ್ತು ಮುಂದುವರಿಯಲು ಅವಕಾಶಗಳು ಲಭ್ಯವಾಗಬೇಕು. (ಸಾಮಾಜಿಕ) ನವೀಕರಿಸಬಹುದಾದ ಶಕ್ತಿಮೂಲಗಳ ಪೂರ್ಣ ಬಳಕೆ (ಸುಸ್ಥಿರ ಪರಿಸರ ನಿರ್ಮಾಣ). ಅತ್ಯುತ್ತಮ ಆಡಳಿತ ನಿರ್ವಹಣೆ. 'ಜನರು ಸಂತಸ ಪಡುವ ದಿಟವಾದ ಸ್ವಾತಂತ್ರ್ಯವನ್ನು ವಿಸ್ತರಿಸುವ ಪ್ರಕ್ರಿಯೆಗೆ ಅಭಿವೃದ್ಧಿ ಎನ್ನಲಾಗುತ್ತದೆ.' ಎಂಬುದು ನೊಬೆಲ್ ಪಾರಿತೋಷಕ ವಿಜೇತ ಆರ್ಥಿಕ ತಜ್ಞ ಅಮೃತ್ಯ ಸೇನ್ ರವರ ಉಕ್ತಿ. ಆದರೆ ಭಾರತದಲ್ಲಿ ನಾವು ಈ ಸಾಧನೆ ಮಾಡಲು ಸಾಧ್ಯ ಅಸಾಧ್ಯತೆ ಪರಿಶೀಲಿಸುವಲ್ಲಿ ಆರ್ಥಿಕ ನೀತಿ ರೂಪಕರ ವಲಯದಲ್ಲಿ ಕೇಳಿ ಬರುವ ಮಾತು 'ಭಾರತದಲ್ಲಿ ಬಾಯಲ್ಲಿ ನೀರೂರಿಸುವಷ್ಟು ಅವಕಾಶಗಳು ಆದರೆ ಕಣ್ಣಲ್ಲಿ ನೀರು ತರಿಸುವಷ್ಟು ಸವಾಲುಗಳು' ಎಲ್ಲರನ್ನು ಒಳಗೊಂಡ ಸಮತಾ ಸಮಾಜ ನಿರ್ಮಾಣಕ್ಕೆ ಕಾರಣವಾಗಬಲ್ಲ ಕ್ಷೇತ್ರ ಸಹಕಾರ ಕ್ಷೇತ್ರ. ಇದು ಒಂದು ಅವಕಾಶ.

1990ರ ದಶಕದಾಚೆಗಿನ ಆರ್ಥಿಕ ಪ್ರಗತಿ ಮೆಚ್ಚ ಬೇಕಾದುದೇ ಆಗಿದೆ. ಆದರೆ ಉದಾರೀಕರಣ ಮತ್ತು ಬಂಡವಾಳ ಶಾಹಿ ಪದ್ಧತಿ ಅಳವಡಿಕೆ ಸಮಾಜದಲ್ಲಿ ನೆಮ್ಮದಿ ತಂದಿದೆಯೇ? ಆಸಮಾನತೆಯ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತಿದೆ ಯಲ್ಲವೇ?

ಹೀಗಿದ್ದಲ್ಲಿ ' ವಿಕಸಿತ ಭಾರತ' ಕನಸು ನನಸಾಗುವುದೆಂತು? ಇಂತಹ ಪ್ರಶ್ನೆಗಳಿಗೆ ಉತ್ತರ ಸಹಕಾರ ಪದ್ಧತಿ ಯಲ್ಲಿ ಇದೆಯಲ್ಲವೇ? ಇದನ್ನು ಅಳವಡಿಸಿಕೊಂಡು ಜಾರಿಗೆ ತರುವುದೇ ದೊಡ್ಡ ಸವಾಲಾಗಿದೆಯೇ ಎಂಬ ಮೂಲಭೂತ ಪ್ರಶ್ನೆ ಸಹಕಾರಿಗಳನ್ನು ಕಾಡುತ್ತದೆಯಲ್ಲವೇ? ಸಹಕಾರಿಗಳ ಆತ್ಮ ವಿಶ್ಲೇಷಣೆಗೆ ಇದು ಸಕಾಲ.

ವಿಶ್ವ ಸಂಸ್ಥೆ ಮತ್ತು ಅಂತರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ 2025 ನೇ ಇಸವಿಯನ್ನು ಅಂತರಾಷ್ಟ್ರೀಯ ಸಹಕಾರ ವರ್ಷ ಎಂದು ಘೋಷಿಸಿದೆ. 'ಉತ್ತಮ ವಿಶ್ವ ನಿರ್ಮಾಣ' ಧ್ಯೇಯ ತಿಳಿಸುವ ಪದಪುಂಜ ವಾಗಿದೆ. ಇದನ್ನು ಉದ್ಘೋಷಿಸುವ ಅಂಗವಾಗಿ ನಡೆಯುತ್ತಿರುವ 2024ರ ಅಂತರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯ ಮಹಾಸಭೆ ಮತ್ತು ಆದಿ ವೇಶನ ಪ್ರಥಮ ಬಾರಿಗೆ ಭಾರತದಲ್ಲಿ, ನವದೆಹಲಿಯಲ್ಲಿ ನಡೆಯುತ್ತಿರುವುದು (ದಿನಾಂಕ 25ನೇ ನವೆಂಬರ್ 30 ನೆ ನವೆಂಬರ್ 2024) ಭಾರತದ ಸಹಕಾರಿಗಳಿಗೆ ಹೆಮ್ಮೆಯ ವಿಷಯವಾಗಿರುತ್ತದೆ.

ಇದೇ ಸಂದರ್ಭದಲ್ಲಿ ಭಾರತದಲ್ಲಿ ಸಹಕಾರ ಸಪ್ತಾಹದ ಆಚರಣೆಯು

ನಡೆಯುತ್ತಿದ್ದು ಧ್ಯೇಯ ವಾಕ್ಯ "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರದ ಪಾತ್ರ. ಎಂಬುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಸವಾಲುಗಳನ್ನು ಎದಿರುಸುವ ಬಗೆ ಬಗ್ಗೆ ಚಿಂತನ–ಮಂಥನ ನಡೆಸಿ ಸಹಕಾರಿಗಳು ದಿಟ್ಟ ಹೆಜ್ಜೆ ಇಡಬೇಕಾಗಿರುವುದು ಈ ದಿನಮಾನಗಳ ಅತಿ ಅಗತ್ಯ ಅವಶ್ಯಕತೆ ಯಾಗಿದೆ.

**1. ಹಸಿವು :** ವಿಶ್ವದ ಜನಸಂಖ್ಯೆಯ ಶೇ.9.4 ಎಂದರೆ 757 ದಶಲಕ್ಷ ಜನ (2023) ಆಫ್ರಿಕ ಖಂಡ – ಶೇ.20.4 ಎಂದರೆ 298.4 ದಶಲಕ್ಷ, ಏಶಿಯಾ ಖಂಡ ಶೇ.8.5 ಎಂದರೆ 384.5 ದಶಲಕ್ಷ, ಭಾರತದಲ್ಲಿ ಶೇ.2.5 ಎಂದರೆ 3.5 ಕೋಟಿ ಜನತೆ ಅರೆ ಹೊಟ್ಟೆಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇವರಲ್ಲಿ ಖರೀದಿ ಶಕ್ತಿ ಇಲ್ಲ. 84.5 ಕೋಟಿ ಜನತೆಗೆ ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯದೆಯಲ್ಲಿ ಆಹಾರ ಒದಗಿಸಲಾಗುತ್ತಿದೆ. ಮೇಲಾಗಿ ಸಮತೋಲನ ಪೌಷ್ಠಿಕ ಆಹಾರ ಒದಗಿಸುವ ಸವಾಲಿದೆ. ಒಂದು ಅಂದಾಜಿನ ಪ್ರಕಾರ ಭಾರತದ ಬಡ ಜನತೆಯ ಒಬ್ಬ ವ್ಯಕ್ತಿಯ ಮಾಹೆಯಾನ ಬಳಕೆ ಖರ್ಚು ಗ್ರಾಮೀಣ ಪ್ರದೇಶದಲ್ಲಿ ರೂ 2197 ಇದರಲ್ಲಿ ಆಹಾರಕ್ಕಾಗಿಯೇ ರೂ 1569 ಇತರೆ ಖರ್ಚು ರೂ.628, ನಗರ ಪ್ರದೇಶದಲ್ಲಿ ರೂ 3077 ಇದರಲ್ಲಿ ಆಹಾರಕ್ಕಾಗಿ ರೂ 2098, ಇತರೆ ರೂ 979 ಖರ್ಚು ತಗುಲುತ್ತದೆ. ಇದರಿಂದ ಬಡ ಜನತೆಯ ಸಂಕಷ್ಟವನ್ನು ಅರಿಯಬಹುದಾಗಿದೆ. ಆಹಾರ ಭದ್ರತೆ ಗೆ ಅವಶ್ಯ ನಾಲ್ಕು ಅಂಶಗಳು (1) ಆಹಾರ ಲಭ್ಯತೆ (2) ಆಹಾರ ದೊರಕುವಿಕೆ (3) ಆಹಾರದ ಬಗ್ಗೆ ಅರಿವು (4) ಒಪ್ಪುವಂತ ಆಹಾರ. ಈ ಎಲ್ಲ ಅಂಶಗಳನ್ನು ಸಾಕಾರ ಗೊಳ್ಳಲು ಸಹಕಾರ ಕ್ಷೇತ್ರವನ್ನು ಮತ್ತಷ್ಟು ಬಲ ಪಡಿಸುವ ಅಗತ್ಯತೆ ಇದೆ. ಈ ವರ್ಷದ 'ವಿಶ್ವ ಆಹಾರ ದಿನ 'ದ ಘೋಷ ವಾಕ್ಯ 'ಉತ್ತಮ ಜೀವನಕ್ಕಾಗಿ ಆಹಾರದ ಹಕ್ಕು ಮತ್ತು ಉತ್ತಮ ಭವಿಷ್ಯ' ಎಂಬುದಾಗಿದ್ದು 'ಹಸಿವು' ನ ಪ್ರಾಮುಖ್ಯತೆ ಯನ್ನು ತೋರಿಸುತ್ತದೆ.

**2. ಅಸಮಾನತೆ :** ಖಾಸಗಿಕರಣ (ಬಂಡವಾಳಶಾಹಿ ) ದಿಂದಾಗಿ ಭಾರತ 'ಅತ್ಯಂತ ಶ್ರೀಮಂತರ ಬಡರಾಷ್ಟ್ರ' ಎಂದೆನಿಸಿಕೊಂಡಿದೆ. ಜನತೆಯ ಮೇಲ್ಪದರದ ಶೇ.01 ಒಟ್ಟು ಸಂಪತ್ತಿನ ಶೇ.40 ಹೊಂದಿರುತ್ತಾರೆ. ಅಸಮಾನತೆಗೆ ಕಾರಣ ಬಂಡವಾಳಶಾಹಿಗಳ ಬಂಡವಾಳ ಗಳಿಸುವಿಕೆ. ಬಂಡವಾಳ ಕ್ರೋಡಿಕರಣಕ್ಕೆ ಅನುಸರಿಸುವ ಮಾರ್ಗೋಪಾಯಗಳು ಅನೇಕ ವೇಳೆ ಅನೈತಿಕ ವಾಗಿಯೇ ಇರುತ್ತವೆ. ಉದಾ: ಷೇರು ಮಾರುಕಟ್ಟೆ ಕೈ ಚಳಕಗಳು, ರಾಜಕೀಯ ಲಾಭಗಳಿಸಿ ತಮಗೆ ಅನುಕೂಲಕರ ನೀತಿಗಳ ಜಾರಿ, ಇದರಿಂದ ಲಾಭಗಳಿಕೆಯೇ ಉದ್ದೇಶವಾಗಿದ್ದು ಗಳಿಸುವ ಮಾರ್ಗಗಳು ಅನುಚಿತವಾಗಿದ್ದು ಆಸಮಾನತೆಯು ಹೆಚ್ಚುವುದಕ್ಕೆ ಕಾರಣವಾಗಿರುತ್ತದೆ. ಅಸಮಾನತೆಯು ಅಪರಾಧಗಳಿಗೆ ದುಷ್ಕೃತ್ಯ ಗಳಿಗೆ ಕಾರಣವಾಗುತ್ತದೆ. ಆರ್ಥಿಕತೆ ಮೇಲಿನಿಂದ ಕೆಳಗೆ ಜಿನುಗುತ್ತದೆ ಎಂಬ ಎಂಬ ವಾದ ನಮ್ಮ



ಆರ್ಥಿಕತೆಯ ಬೆಳವಣಿಗೆಗೆ ಪೂರಕವಾಗಿರುವುದಿಲ್ಲ. ಸಮಾನತೆಯ ಆಧಾರದಲ್ಲಿ ಕೆಳಗಿನಿಂದ (ತಳದಿಂದ) ಮೇಲುಗಡೆಗೆ ಆರ್ಥಿಕತೆ ಬೆಳೆಯಲು 'ಸಹಕಾರ' ಮಾದರಿಯಿಂದ ಮಾತ್ರ ಸಾಧ್ಯ.

**3. ನಿರುದ್ಯೋಗ :** ಭಾರತದ ದುಡಿಯಬಲ್ಲ ವಯಸ್ಸಿನ ಜನಸಂಖ್ಯೆ 950 ದಶಲಕ್ಷ ಇದರಲ್ಲಿ ಶೇ.50 ಮಾತ್ರ ಉದ್ಯೋಗದಲ್ಲಿ ದ್ದಾರೆ ಅದರಲ್ಲಿಯೂ ಹಲವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತಹ ಉದ್ಯೋಗದಲ್ಲಿಲ್ಲ. ಶೇ.50 ನಿರುದ್ಯೋಗಿಗಳಾಗಿರುತ್ತಾರೆ. ಬಂಡವಾಳ ಹೂಡಿಕೆ ನಿರೀಕ್ಷಿಸಿದಷ್ಟು ಉದ್ಯೋಗ ಸೃಷ್ಟಿಸುತ್ತಿಲ್ಲ. ಉದ್ಯೋಗ ಮಾತ್ರ ಸ್ವಸ್ತ ಸಮಾಜ ನಿರ್ಮಾಣ ಮಾಡಬಲ್ಲದು. ಸ್ವ ಉದ್ಯೋಗ ಅನೇಕ

ಸವಾಲುಗಳನ್ನು ಎದುರಿಸುತ್ತಿದೆ. ಕೃಷಿ ಮತ್ತು ಕೃಷಿ ಅವಲಂಭಿತ ಉದ್ಯೋಗ ಗಳಾಗಲಿ, ಕೈಗಾರಿಕೆ ಕ್ಷೇತ್ರ ವಾಗಲಿ, ಕೈಗಾರಿಕೆಗೆ ಸರಬರಾಜು ಮಾಡುವ ಕಿರು ಉಧ್ಯಮಗಳಾಗಲಿ ಆಧುನಿಕ ತಾಂತ್ರಿಕತೆ ಅಳವಡಿಕೆಯೊಂದಿಗೆ ಮುಂದುವರಿಕೆ ಅಗತ್ಯ. ಇದಕ್ಕೆ ಸೂಕ್ತ ಕುಶಲತೆ (ನೈಪುಣ್ಯತೆ) ಅಭಿವೃದ್ಧಿ ಅಗತ್ಯ. ಈ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಒತ್ತು ನೀಡಬೇಕಾಗಿದೆ. ಭಾರತವು 2023–24ರ ಮಾನವ ಸಂಪನ್ಮೂಲ ಸೂಚ್ಯಂಕ 0–644 ಇದ್ದು 193 ರಾಷ್ಟ್ರಗಳಲ್ಲಿ 134ನೇ ಸ್ಥಾನದಲ್ಲಿದೆ ಎಂಬುದನ್ನು ವಿಷಾದಿಂದಲೇ ಒಪ್ಪಿಕೊಳ್ಳ ಬೇಕಿದೆ. ಇತರೆ ರಾಷ್ಟ್ರಗಳು ಅವರಣದಲ್ಲಿರುವುದು ಸ್ಥಾನ, ಮಲ್ಯೇಷಿಯಾ (63) ಥೈಲ್ಯಾಂಡ್ (66) ಚೈನಾ (75). ಇದರಿಂದ ನಮ್ಮ ಪ್ರಗತಿ ನಿಧಾನ ಗತಿಯಲ್ಲಿರುವುದನ್ನು ಅರಿಯಬಹುದು. ಕೃಷಿ ಮತ್ತು ಕೃಷಿ ಅವಲಂಭಿತ ಕ್ಷೇತ್ರ ದಲ್ಲಿ ಹಾಲಿನ ಕ್ಷೇತ್ರ ತಕ್ಕ ಮಟ್ಟಿಗೆ ಸಹಕಾರ ಕ್ಷೇತ್ರವಾಗಿ (ಶೇ70) ಅವಲಂಭಿಸಿದೆ. ಅದು ಕೂಡ ಖಾಸಗಿ ವಲಯದಿಂದ ಸ್ಪರ್ಧೆ ಎದುರಿಸುತ್ತಿದೆ. ಅಲ್ಲದೆ ಮೂಲ ಬುಡ ವ್ಯವಸ್ಥೆಯನ್ನೇ ಅಲುಗಾಡಿಸುತ್ತಿದೆ. (ಚಾಮರಾಜನಗರ ತಾಲ್ಲೂಕು, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಆಡಳಿತ ದಲ್ಲಿ ಒಡಕು ಮೂಡಿಸುವುದು, ಆಮಿಷ ಒಡ್ಡುವುದು, ಹಸ್ತಕ್ಷೇಪ ಮಾಡುವುದು ಮುಂತಾದ ಕ್ರಿಯೆ ಗಳಿಂದ ವ್ಯವಸ್ಥೆ ಹಾಳುಗೆಡವಿ ತಾನು ಹಾಲು

ಸಂಗ್ರಹಣೆ ಹೆಚ್ಚಳ ಮಾಡಲು ಖಾಸಗಿ ಕಂಪನಿಗಳು ಹವಣಿಸುತ್ತಿವೆ) ಇತರೆ ಉತ್ಪನ್ನಗಳ ಪಾಲು ಅತ್ಯಂತ ಕಡಿಮೆ ಇದೆ. ಕೈಗಾರಿಕೆ ಕ್ಷೇತ್ರದಲ್ಲಿ ಹಿಂದೆ 'ಕೈಗಾರಿಕಾ ಸಹಕಾರ ಸಂಘಗಳು' ಕಾರ್ಯನಿರ್ವಹಿಸುತ್ತಿದ್ದವು. ಈಗ ಈ ವಲಯವನ್ನು ಪುನರ್ ರಚಿಸಬೇಕಾಗಿದೆ.

ಕೈಗಾರಿಕೆ ವಲಯ ಪ್ರದೇಶಗಳಲ್ಲಿ ಸಹಕಾರ ವಲಯ ಕೂಡ 'ಸಹಕಾರ ಉದ್ಯೋಗ' (Cooperative enterprise) , ಸಹಕಾರದ ಮೂಲಕವೂ 'ನಾವು ವಾಣಿಜ್ಯೋದ್ಯಮಿ' ಗಳಾಗಬಹುದು ಎಂಬ ಅರಿವು ಮೂಡಿಸಬೇಕಾಗಿದೆ. ಹಾಗೆ ಭಾರತದಲ್ಲಿ ಕೃಷಿ ಮತ್ತು ತೋಟಗಾರಿಕೆ ವಲಯದಲ್ಲಿ 93. 09 ದಶಲಕ್ಷ ಕುಟುಂಬಗಳು ತೊಡಗಿಸಿ ಕೊಂಡಿದ್ದು ಶೇ.82 ಸಣ್ಣ ಮತ್ತು ಅತಿ ಸಣ್ಣ ರೈತರಿರುತ್ತಾರೆ. ಸಹಕಾರ ಸಂಘಟನೆ ಇಂದ ಮಾತ್ರ ಮಧ್ಯಮ ವರ್ತಿಗಳಿಲ್ಲದೆ ನ್ಯಾಯಯುತ ಬೆಲೆ ದೊರಕಿಸ ಬಹುದು. ಗ್ರಾಹಕರು ಖರೀದಿಸುವ ಬೆಲೆಯ ಶೇಕಡ 30 ಕೂಡ ಉತ್ಪಾದಕರಿಗೆ ದೂರುಯುವುದಿಲ್ಲ ಎಂದು ಇತ್ತೀಚೆಗಿನ ಸಮೀಕ್ಷ ವರದಿ ತಿಳಿಸುತ್ತದೆ. ಹಾಲಿನಲ್ಲಿ ಇದು ಶೇ.70 ಇದೆ. ಇದಕ್ಕೆ ಕಾರಣ ನಿರ್ಮಾಣವಾಗಿರುವ ಅಮುಲ್ ಮಾದರಿ 'ಸಹಕಾರ ವ್ಯವಸ್ಥೆ'. ಜಂಟಿ ಕೃಷಿ, ಸಮೂಹಿಕ ಕೃಷಿ, ಸಹಕಾರ ಮಾರುಕಟ್ಟೆ ಮಾತ್ರ ಪರಿಹಾರ ಒದಗಿಸಬಲ್ಲದು. ಇದರಿಂದ ಗ್ರಾಮೀಣ ಜನತೆಗೆ ಹೆಚ್ಚಿನ ಉದ್ಯೋಗ ಸೃಷ್ಟಿ ಯಾಗುವುದಲ್ಲದೆ ಜನತೆಯ ನಗರ ವಲಸೆ ಯನ್ನು ತಡೆಗಟ್ಟಬಲ್ಲದು. ಇದರಿಂದಾಗುತ್ತಿರುವ ಅನೇಕ ಸಂಕಷ್ಟಗಳು ಪರಿಹಾರವಾಗ ಬಲ್ಲುದಲ್ಲದೆ ಆರ್ಥಿಕ ಸಬಲತೆಗೆ ಕಾರಣವಾಗಬಲ್ಲದು. ರಫ್ತು ಮೂಲಕ ವಿದೇಶಿ ವಿನಿಮಯ ಗಳಿಕೆಗೂ ವಿಪುಲ ಅವಕಾಶಗಳಿವೆ.

**4) ಮಧ್ಯಮ ಆದಾಯದ ಬಲೆ :** (Middle Income Trap). ವಿಶ್ವಬ್ಯಾಂಕ್ ವರದಿ ಈ ವಿಷಯದಲ್ಲಿ ಆರ್ಥಿಕ ತಜ್ಞರ ಗಮನ ಸೆಳೆದಿದೆ. ಹಾಲಿ ಆರ್ಥಿಕ ಬೆಳವಣಿಗೆ ಧರದಲ್ಲಿ ಅಮೇರಿಕನ್ನರ ತಲಾ ಆದಾಯದ ಕಾಲು ಭಾಗ ತಲುಪಲು ಭಾರತೀಯರಿಗೆ 75 ವರ್ಷಬೇಕು. ಭಾರತವು ಸೇರಿದಂತೆ 108 ಮಧ್ಯಮ ಆದಾಯದ ದೇಶಗಳಲ್ಲಿ ಭಾರತವೂ ಸೇರಿವೆ. ಇದರ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

ರೂ.95, 378 ರಿಂದ 11.62 ಈ ರಾಷ್ಟ್ರಗಳ ಜನರ ತಲಾ ಆಧಾಯ, ಶೇ.75 ಪ್ರಪಂಚದ ಒಟ್ಟು ಜನಸಂಖ್ಯೆ ಯಲ್ಲಿ ಈ ರಾಷ್ಟಗಳ ಪಾಲು, ಶೇ.60. ಜಗತ್ತಿನಲ್ಲಿರುವ ಬಡವರ ಪೈಕಿ ಈ ದೇಶಗಳಲ್ಲಿರುವವರ ಪ್ರಮಾಣ – ಈ ಸಂಖ್ಯೆ 40 ಕೋಟಿ, ಜಾಗತಿಕ ಮಟ್ಟದ ಆರ್ಥಿಕ ಚಟುವಟಿಕೆ ಗಳಿಗೆ ಈ ರಾಷ್ಟಗಳ ಕೊಡುಗೆ ಪ್ರಮಾಣ ಶೇ 40. ಈ ದೇಶಗಳು ಆರ್ಥಿಕತೆ ಅಭಿವೃದ್ಧಿ ಹೊಂದಲು ಅತ್ಯಂತ ಹಳೆಯ ತಂತ್ರಗಳ ಮೊರೆ, ದೀರ್ಘ ಕಾಲದ ಹೂಡಿಕೆ ಅವಲಂಭನೆ, ತಂತ್ರಜ್ಞಾನ ಮತ್ತು ಸಂಶೋಧನೆ ನಿರ್ಲಕ್ಷಿಸಿವೆ. ಈ ರಾಷ್ಟ್ರಗಳಿಗೆ ಹೊಸ ದೃಷ್ಟಿ ಕೋನ ಬೇಕಿದೆ. ಅದಕ್ಕಾಗಿ ಮೂರು 'ಐ'ಗಳ ಅಳವಡಿಕೆ ಪ್ರತಿಪಾಧಿಸಿದೆ.

Investment – ಹೂಡಿಕೆ, Infusion – ಅಳವಡಿಕೆ, Innovation – ಅವಿಷ್ಕಾರ, ಇವುಗಳನ್ನು ಅನುಷ್ಠಾನ ಗೊಳಿಸುವಲ್ಲಿ ಉದ್ಯಮ (enterprise), ಕೌಶಲ ವೃದ್ಧಿ / ಪ್ರತಿಭೆ (Talent) ಮತ್ತು ಇಂಧನ (energy)ಗೆ ಹೆಚ್ಚು ಒತ್ತು ನೀಡಬೇಕಾಗಿ ತಿಳಿಸಿದೆ. ಇದು ಒಂದು ಮಾರ್ಗ ಸೂಚಿ ಯಾಗಿದ್ದು ಸಹಕಾರ ವಲಯ ಇವುಗಳನ್ನು ಅಳವಡಿಸಿ ಕೊಳ್ಳಬೇಕು ಅಲ್ಲದೇ ಅನೇಕ ವಲಯಗಳಲ್ಲಿ ಸಹಕಾರ ವ್ಯವಸ್ಥೆ ರೂಪುಗೊಂಡು ಸಹಕಾರ ಚಳುವಳಿ ಯಶಸ್ವಿಯಾದಲ್ಲಿ ನಮ್ಮ ರಾಷ್ಟ್ರವು 'ಮಧ್ಯಮ ಆದಾಯದ ಬಲೆ' ಯಿಂದ ಹೊರ ಬರಬಹುದಾಗಿದೆ. ಈ ವರ್ಷದ ಸಹಕಾರ ಸಪ್ತಾಹದ ಆಶಯಗಳು ಇದಕ್ಕೆ ಪೂರಕ ವಾಗಿವೆ ಎಂಬುದು ಸಂತಸದ ವಿಷಯವಾಗಿದೆ.

**5) ಮಹಿಳಾ ಸಬಲತೆ ಮತ್ತು ಲಿಂಗ ಅಸಮಾನತೆ :** 2022ರ ಅಧ್ಯಯನ ಪ್ರಕಾರ ವೇತನ ರಹಿತ ಮಹಿಳಾ ಕೌಟುಂಬಿಕ ಕಾರ್ಮಿಕರು ಶೇ.36.5, ಪುರುಷರು ಶೇ.9.3, ಇದು ಮಹಿಳೆಯರಿಗೆ ಉದ್ಯೋಗವಕಾಶ ದೊರೆಕಿಸಲು ಇರುವ ಅವಕಾಶಗಳ ಬಗ್ಗೆ ತಿಳಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಇನ್ನು undefined ಸಾಂಪ್ರದಾಯಿಕ ಉದ್ಯೋಗಗಳಲ್ಲಿ ತೊಡಗಿತುಕೊಂಡಿದ್ದು ಆದಾಯ ವಂಚಿತ ರಾಗಿರುತ್ತಾರೆ.

ಆಧುನಿಕ ಅವಕಾಶಗಳಿವೆ. ಇದರಲ್ಲಿ ತೊಡಗಿಸಿಕೊಳ್ಳಲು ಸ್ವಸಹಾಯ ಗುಂಪುಗಳಲ್ಲದೇ ಮಹಿಳಾ ಸಹಕಾರ ಸಂಘಗಳು ತೊಡಗಿಸಿಕೊಳ್ಳುವ ಅವಶ್ಯಕತೆ ಇದೆ. ಇತರೆ ಸಹಕಾರ ಸಂಘಗಳಲ್ಲಿಯೂ ಮಹಿಳಾ ಪಾಲ್ಗೊಳ್ಳುವಿಕೆ ಯನ್ನು ಹೆಚ್ಚಳ ಗೊಳಿಸುವ ಅವಶ್ಯಕತೆ ಇದೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಸಸಿಗಳ ಉತ್ಪತ್ತಿ (ನರ್ಸರಿ), ಎರೆಹುಳು ಗೊಬ್ಬರ ಉತ್ಪಾದನೆ, ಕೈಗೊಳ್ಳಲು ವಿಪುಲ ಅವಕಾಶಗಳಿವೆ. ಭಾರತದಲ್ಲಿ ಲಿಂಗ ಅಸಮಾನತೆಯ ಅಂತರ ಬಹಳಷ್ಟಿದೆ. ಕಾರ್ಮಿಕ ಶಕ್ತಿ ಭಾಗವಹಿಸುವ ದರ ಪುರುಷರು ಶೇ.76.1 ಮಹಿಳೆಯರು ಶೇ 28.3 ಅಂತರ ಶೇ.47.8 ಇರುತ್ತದೆ.

ಮಹಿಳಾ ಆರ್ಥಿಕ ಸಬಲತೆ ಇಡೀ ಕುಟುಂಬಕ್ಕೆ ಅದರ ಅಭ್ಯುದಯಕ್ಕೆ ತನ್ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಕಾರಣವಾಗುತ್ತದೆ.

ಈ ಮೇಲಿನ ಎಲ್ಲ ಅಂಶಗಳು ವಿಶ್ವಸಂಸ್ಥೆ ನಿಗದಿ ಪಡಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳು–2030ಕ್ಕೆ ಪೂರಕವಾಗಿದ್ದು ವಿಶ್ವದ ಅತ್ಯಂತ ಹೆಚ್ಚಿನ ಸದಸ್ಯತ್ವ ಹೊಂದಿದ ಭಾರತ ರಾಷ್ಟ್ರವು ಈ ದಿಸೆಯಲ್ಲಿ ಹೆಜ್ಜೆ ಇಡುವುದು ಈ ದಿನಗಳ ತುರ್ತು ಅಗತ್ಯತೆ ಯಾಗಿದೆ. ಒಟ್ಟಾರೆ 'ವಿಕಸಿತ ಭಾರತ'ದ ಗುರಿ ತಲುಪುವಲ್ಲಿ ಸಹಕಾರದ ಪಾತ್ರ ಮಹತ್ತರ ಪಾತ್ರ ವಹಿಸಬಲ್ಲದು. ಭಾರತದ ಸಂವಿಧಾನದ ಆಶಯವಾದ ಕಲ್ಯಾಣ ರಾಜ್ಯ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ನಿರ್ವಹಣೆ 'ಸಹಕಾರ ಚಳುವಳಿ'ಯದಾಗಲಿ ಎಂದು ಆಶಿಸೋಣ.

**ಉತ್ತಮವಾದುದು ಶ್ರಮವಿಲ್ಲದೆ ಲಭಿಸದು,**
**ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಅಲ್ಲ – ಕುವೆಂಪು.**

(ಆಧಾರ : ಪ್ರಜಾವಾಣಿ, ದಿ ಹಿಂದೂ, ಇಂಟರ್ ನೆಟ್ ಲೇಖನಗಳು)

# ಸದಸ್ಯರ ಆರ್ಥಿಕ ಪ್ರಗತಿಗೆ ಪೂರಕ–ಪ್ರೇರಕ
# ಪ್ರಗತಿಯ ಪಥದಲ್ಲಿ ಮೂಡಬಿದರೆ ಆಳ್ವಾಸ್ ಸಹಕಾರ ಸಂಘ

ಕರ್ನಾಟಕವು ಮೊದಲಿನಿಂದಲೂ ಸಹಕಾರ ಚಳವಳಿಯಲ್ಲಿ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಇಲ್ಲಿನ ಅನೇಕ ಸಹಕಾರಿ ಸಂಘ ಸಂಸ್ಥೆಗಳು ಮಾದರಿಯಾಗಿ ಕಾರ್ಯನಿರ್ವಹಿಸುತ್ತಾ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅಸಂಖ್ಯಾತ ಮಂದಿಗೆ ಉದ್ಯೋಗ ನೀಡಿವೆ. ಅಷ್ಟೇ ಅಲ್ಲ, ಅನೇಕ ಮಹನೀಯರು ಮತ್ತು ಮಹಿಳೆಯರು ಸಹಕಾರಿ ರಂಗದ ಮೂಲಕವೇ ಪ್ರವೇಶಿಸಿ ಸಾರ್ವಜನಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದಾರೆ ಎಂಬುದು ವಿಶೇಷವಾಗಿದೆ.

ಹಾಗೆಯೇ, ನಗರ ಪ್ರದೇಶದ ಅಬಲವರ್ಗದವರ ಆರ್ಥಿಕ ಸೌಲಭ್ಯಗಳ ಪೂರೈಕೆಯಲ್ಲಿ ಪತ್ತಿನ ಸಹಕಾರ ಸಂಘಗಳು ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸಿಕೊಂಡು ಬರುತ್ತಿವೆ. ಸಾರ್ವಜನಿಕರ ಹಿತಾಸಕ್ತಿಗಾಗಿ ಅವರ ಆರ್ಥಿಕ ಸ್ವಾವಲಂಬನೆಯ ಯಶಸ್ಸಿನೊಂದಿಗೆ ಸಮಾಜದ ಪ್ರಗತಿಯೂ ಸಹ ಈ ಸಂಸ್ಥೆಗಳ ಉದ್ದೇಶವಾಗಿದೆ. ಆರ್ಥಿಕ ಸಬಲೀಕರಣದ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ಮಾಡುವುದು ಸಹಕಾರದ ಮೂಲೋದ್ದೇಶ. ಇದು ಪ್ರಜಾಪ್ರಭುತ್ವದ ಪರಿವರ್ತನೆಗೆ ಪೂರಕ ಅನಿಸಿದೆ. ಇದರಿಂದ ಸಾರ್ವಜನಿಕ ವಲಯ ಮತ್ತು ಖಾಸಗಿ ಕ್ಷೇತ್ರ ಹಾಗೂ ಸಹಕಾರಿ ಕ್ಷೇತ್ರದ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗುತ್ತದೆ ಹಾಗೂ ಅತಿ ಸಣ್ಣ ಹಿಡುವಳಿದಾರರು, ಉದ್ಯೋಗಿಗಳು ಸಣ್ಣ ವ್ಯಾಪಾರಿಗಳು, ಚಿಲ್ಲರೆ ಮಾರಾಟಗಾರರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಮುಂದುವರೆಯಲು ಈ ಪತ್ತಿನ ಸಹಕಾರ ಸಂಸ್ಥೆಗಳು ಸಹಾಯ ಹಾಗೂ ಸಹಕಾರ ನೀಡುತ್ತಿವೆ.




ಕಳೆದೆರಡು ದಶಕಗಳಲ್ಲಿ ಕರ್ನಾಟಕದಲ್ಲಿ ಸಹಕಾರ ಚಳವಳಿ ವ್ಯಾಪಕವಾಗಿ ಹಬ್ಬಿ ಪ್ರಶಂಸಾರ್ಹ ಪ್ರಗತಿಯನ್ನು ಸಾಧಿಸಿದೆ.ಕೃಷಿ, ಹೈನುಗಾರಿಕೆ, ಪಟ್ಟಣ ಬ್ಯಾಂಕಿಂಗ್, ಕೃಷಿಯೇತರ ಪತ್ತು, ಮಾರಾಟ ವ್ಯವಸ್ಥೆ, ಗೃಹ ನಿರ್ಮಾಣ ಕ್ಷೇತ್ರಗಳಲ್ಲಿ ದಾಪುಗಾಲಿಡುತ್ತಿದೆ. ಪತ್ತಿನ ಸಹಕಾರ ಸಂಘಗಳು ಇಂದು ಗಮನಾರ್ಹವಾದಂತಹ ಸಾಧನೆ ಮಾಡುವ ಮೂಲಕ ಸದಸ್ಯರಲ್ಲಿ ವಿಶ್ವಾಸ ಹಾಗೂ ಬದ್ಧತೆಗೆ ಪಾತ್ರವಾಗಿವೆ. ಇನ್ನು ಮೂಡುಬಿದಿರೆಯ ಆಳ್ವಾಸ್ ಸಹಕಾರ ಸಂಘವು ಸಹ ಕಳೆದ 8 ವರ್ಷಗಳಿಂದ ತನ್ನ ಸದಸ್ಯರ ಸ್ವಾವಲಂಬಿ ಬದುಕಿನ ಪ್ರೇರಣೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕದಲ್ಲಿ ಹಲವು ಪ್ರದೇಶಗಳು ತನ್ನದೇಯಾದ ಸಾಂಸ್ಕೃತಿಕ ಇತಿಹಾಸವನ್ನೊಂದಿದ್ದು, ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆ ಶೈಕ್ಷಣಿವಾಗಿಯೂ, ಸಾಂಸ್ಕೃತಿಕವಾಗಿಯೂ ಅದರ ಜೊತೆಗೆ ಸಹಕಾರ ರಂಗದಲ್ಲಿಯೂ ಮುಂಚೂಣಿಯಲ್ಲಿದೆ.

ಇನ್ನು ಮೂಡಬಿದರೆಯ ಆಳ್ವಾಸ್ ಶೈಕ್ಷಣಿಕ ಸಂಸ್ಥೆಯು ರಾಜ್ಯದಾದ್ಯಂತ ತನ್ನದೇ ಆದ ವಿಶಿಷ್ಟತೆಯೊಂದಿಗೆ ಜನಮನ್ನಣೆ ಗಳಿಸಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದಲ್ಲದೆ ಸಾಂಸ್ಕೃತಿಕ ಮೌಲ್ಯಗಳ ಚಿತ್ತಾರದಲ್ಲಿ ಈ ಸಂಸ್ಥೆಯು ಬಹಳ ಮುಂಚೂಣಿಯಲ್ಲಿದ್ದು, ಇದೀಗ ಸಹಕಾರ ಕ್ಷೇತ್ರದಲ್ಲಿಯು ತನ್ನ ಹೆಸರನ್ನು ಗುರುತಿಸಿಕೊಳ್ಳುವತ್ತ ಒಂದು ಹೆಜ್ಜೆ ಇಟ್ಟಿದೆ. ಇಲ್ಲಿನ ಶಿಕ್ಷಕರು ಸೇರಿದಂತೆ ವಿವಿಧ ರೀತಿಯ ಸದಸ್ಯರನ್ನೊಳಗೊಂಡು ಆಳ್ವಾಸ್ ಸಹಕಾರ ಸಂಘ ಪ್ರಗತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಸಂಘದ ಆರಂಭ :** ಸಂಘವು 2016ರಲ್ಲಿ ಆಳ್ವಾಸ್ ಎಜುಕೇಶನ್ ಫೌಂಡೇಶನ್ ಟ್ರಸ್ಟಿ ವಿವೇಕ್ ಆಳ್ವ ಹಾಗೂ ಆಳ್ವಾಸ್ ಸಮೂಹ ಸಂಸ್ಥೆಗಳ ಪೋಷಕರಾದ ಮೋಹನ್ ಆಳ್ವ ಅವರ ಸಮಾಜಮುಖಿ ಚಿಂತನೆಯೊಂದಿಗೆ ಪ್ರಾರಂಭವಾಯಿತು. ಅಂದಿನಿಂದ ಇಲ್ಲಿಯವರೆಗೂ ಶೇ.99

ಸಾಲ ವಸೂಲಾತಿಯೊಂದಿಗೆ ಹಲವಾರು ಪ್ರಶಂಸನೀಯ ಕಾರ್ಯಗಳನ್ನು ಮಾಡಿಕೊಂಡು ಬಂದಿದೆ. ಈ ಸಂಸ್ಥೆಯೂ ಇಂದು ರೂ. 1,67,91,450 ಷೇರು ಬಂಡವಾಳವನ್ನೊಂದಿ ಕಾರ್ಯನಿರ್ವಹಿಸುತ್ತಿದೆ. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಕಾರ್ಯವ್ಯಾಪ್ತಿಯನ್ನು ಹೊಂದಿದೆ. ಸಹಕಾರ ಕ್ಷೇತ್ರ ಜನಸಾಮಾನ್ಯರಿಗೆ ಹತ್ತಿರವಾದುದಾಗಿದ್ದು, ಅಬಲವರ್ಗದವರಿಗೆ ಸಹಾಯ ಹಸ್ತ ನೀಡಲು ಪೂರಕವಾದಂತಹ ವಾತವರಣ ನಿರ್ಮಾಣ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ಇದಕ್ಕೆಲ್ಲ ಡಾ॥ ಮೋಹನ್ ಆಳ್ವರವರ ದೂರದೃಷ್ಟಿಯ ಚಿಂತನೆಯೇ ಕಾರಣವಾಗಿದೆ.

**ಸಂಘದಿಂದ ಸದಸ್ಯರುಗಳಿಗೆ ನೀಡುತ್ತಿರುವ ಸೌಲಭ್ಯಗಳು :** ಸದಸ್ಯರುಗಳ ಅಗತ್ಯಗಳಿಗನುಗುಣವಾಗಿ ಸಂಘದಿಂದ ಪ್ರೋನೋಟ್ ಸಾಲ, ವಾಹನ ಸಾಲ, ಅಡಮಾನ ಸಾಲ, ಠೇವಣಿ ಮೇಲಿನ ಸಾಲ, ಓವರ್ ಡ್ರಾಫ್ಟ್ ಸಾಲ, ಸಂಭಳ ಸಾಲ, ಭದ್ರತಾ ಸಾಲ ಹಾಗೂ ಗೃಹ ಸಾಲವನ್ನು ನೀಡಲಾಗುತ್ತಿದೆ.

**ಸಂಘದ ಸಾಮಾಜಿಕ ಚಟುವಟಿಕೆಗಳು :** ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಧನ ಸಹಾಯ ಮಾಡುವ ಉದ್ದೇಶದಿಂದ ವರದಿ ವರ್ಷದಲ್ಲಿ ರೂ. 18 ಲಕ್ಷ ವನ್ನು ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಗೆ ಸಾರ್ವಜನಿಕ ಉಪಕಾರ ನಿಧಿಯಂತೆ ದೇಣಿಗೆ ನೀಡಲಾಗಿದೆ. ಕನ್ನಡ ಮಾದ್ಯಮ ಶಾಲೆಗಳಲ್ಲಿ ಉತ್ತಮ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ರೂ. 70000 ವಿದ್ಯಾರ್ಥಿ ವೇತನ ನೀಡಲಾಗಿದೆ.ಸಂಘದ ಸಿಬ್ಬಂದಿಯ ಪತಿ ನಿಧನರಾದಾಗ ರೂ. 25000 ನೀಡಲಾಗಿದೆ.

**ಸಂಘದ ಮುಂದಿನ ಯೋಜನೆಗಳು :** 31.3.2025ರ ಕೊನೆಗೆ ಸಂಘವು ಒಟ್ಟು ರೂ.90 ಕೋಟಿ ಠೇವಣಿ ಸಂಗ್ರಹಿಸಿ ರೂ. 85 ಕೋಟಿ ಸಾಲವನ್ನು ನೀಡುವ ಗುರಿ ಹೊಂದಲಾಗಿದೆ. ಈ ಮೂಲಕ ಸಂಘದ ಒಟ್ಟು ವ್ಯವಹಾರವನ್ನು 175 ಕೋಟಿಗಿಂತಲೂ ಹೆಚ್ಚಿಸಿ 3.5 ಕೋಟಿಗಿಂತಲೂ ಅಧಿಕ ನಿವ್ವಳ ಲಾಭ ಗಳಿಸುವ ಗುರಿಯನ್ನು ಆಡಳಿತ ಮಂಡಳಿ ಹೊಂದಿದೆ.

| ಪ್ರಗತಿಯ ಅಂಕಿ ಅಂಶ 31–3–2024 | |
|---|---|
| ಸದಸ್ಯರುಗಳು | 3876 |
| ಷೇರು ಬಂಡವಾಳ | ರೂ. 16791450.00 |
| ಠೇವಣಿಗಳು | ರೂ. 791205572.00 |
| ಸಾಲಗಳು | ರೂ. 767976721.00 |
| ಲಾಭ | ರೂ. 33687726.00 |
| ದುಡಿಯುವ ಬಂಡವಾಳ | ರೂ. 877773105.00 |
| ಆಡಿಟ್ ವರ್ಗೀಕರಣ | 'ಎ' |

## ಆಡಳಿತ ಮಂಡಳಿ



**ಡಾ॥ ಎಂ. ಮೋಹನ ಆಳ್ವ**
**ಅಧ್ಯಕ್ಷರು**



**ಎ. ಮೋಹನ್ ಪಡಿವಾಳ್**
**ಉಪಾಧ್ಯಕ್ಷರು**



**ಅರ್ಪಿತಾ ಶೆಟ್ಟಿ**
**ಮುಖ್ಯಕಾರ್ಯನಿರ್ವಹಣಾಧಿಕಾರಿ**

**ನಿರ್ದೇಶಕರುಗಳು :**

ಜಯಶ್ರೀ ಎ. ಶೆಟ್ಟಿ, ಕೆ. ಶ್ರೀಪತಿ ಭಟ್, ನಾರಾಯಣ ಪಿ.ಎಂ., ಜಯರಾಮ ಕೋಟ್ಯಾನ್, ವಿವೇಕ್ ಆಳ್ವ, ಮೊಹಮ್ಮದ್ ಷರೀಫ್, ದೇವಿಪ್ರಸಾದ್ ಶೆಟ್ಟಿ, ಪ್ರಕಾಶಿನಿ ಹೆಗ್ಡೆ, ಪ್ರೊ॥ ಕುರಿಯನ್, ರಮೇಶ್ ಶೆಟ್ಟಿ, ರಾಮಚಂದ್ರ ಮಿಜಾರು, ಅಶ್ವಿನ್ ಜೊಸ್ಸಿ ಪಿರೇರಾ, ಮೀನಾಕ್ಷಿ ಬಿ. ಹೀಗೆ ಪತ್ತಿನ ಸಹಕಾರ ಸಂಘವೊಂದು ತನ್ನ ಸದಸ್ಯರುಗಳ ಸ್ವಾವಲಂಬಿ ಬದುಕಿಗೆ ಪೂರಕವಾಗಿ ಯೋಜನೆಗಳನ್ನು ರೂಪಿಸಿ, ಪ್ರಾರಂಭವಾದಂತಹ ಕೆಲವೇ ವರ್ಷಗಳಲ್ಲಿ ಉತ್ತಮ ಪ್ರಗತಿ ಸಾಧಿಸಿರುವುದು ಪ್ರಶಂಸಾರ್ಹವಾದುದು. ಹಾಗೇಯೇ ಕನ್ನಡ ಮಾಧ್ಯಮ ಶಾಲೆಗಳಿಗೆ ವಿಶೇಷವಾದ ಪ್ರೋತ್ಸಾಹವನ್ನು ನೀಡುವ ಮೂಲಕ ಇತರಿಗೂ ಮಾದರಿ ಸಂಸ್ಥೆಯಾಗಿ ಗುರುತಿಸಿಕೊಂಡಿದೆ.

## ವೈವಿಧ್ಯಮಯ ಸಾಧನೆಗಳ ಮೂಲಕ ವಿಶ್ವದ ಎರಡನೇ ಅತಿದೊಡ್ಡ ಕಾರ್ಮಿಕರ ಸಹಕಾರ ಸಂಘ ಹೆಮ್ಮೆ – ಹೆಗ್ಗಳಿಕೆ – ಶತಸಂಭ್ರಮ ಆಚರಣೆ ನೂರು ವರ್ಷಗಳ ಸುದೀರ್ಘ ಸೇವೆ

# ಕೇರಳದ ಕಾರ್ಮಿಕರ ಸಹಕಾರ ಸಂಘ

ವಿಶ್ವದಲ್ಲಿ ಇಂದು ಸಹಕಾರ ವಲಯವು ಪ್ರಮುಖವಾದ ಕ್ಷೇತ್ರವಾಗಿದೆ. ಭಾರತದಲ್ಲಿ ಕೂಡ ಸಹಕಾರ ವಲಯ ಮುಂಚೂಣಿಯಲ್ಲಿದೆ. ಮುನ್ನಡೆ ಬರೆದಿದೆ. ವಿಶ್ವದ ಸಹಕಾರ ಸಂಸ್ಥೆಗಳ ಅಂಕಿ–ಅಂಶಗಳ ಪಟ್ಟಿಯಲ್ಲಿ ಭಾರತದ ಹಲವು ಸಹಕಾರ ಸಂಘಗಳು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿವೆ. "ಸಹಕಾರಿ ವ್ಯವಸ್ಥೆ ನಿಂತ ನೀರಲ್ಲ, ಹರಿವಜಲಧಾರೆ" ಎಂಬುವ ಮಾತಿಗೆ ಸಾಕ್ಷಿಯಾಗಿ, ಕಳೆದ 119 ವರ್ಷಗಳ ಸಹಕಾರ ಚಳವಳಿಯ ಇತಿಹಾಸವನ್ನು ಅವಲೋಕಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ.

ಸುದೀರ್ಘವಾದ ಭಾರತದ ಸಹಕಾರ ಚಳವಳಿಯಲ್ಲಿ ಹಲವು ಸಹಕಾರ ಸಂಘಗಳು ಅಬಲರಿಗೆ ಆರ್ಥಿಕ ಸಹಾಯ, ದುಡಿಯುವ ಕೈಗೆ ಕೆಲಸ ನೀಡುವ ಮೂಲಕ, ದೀರ್ಘ ಸೇವೆ ನೀಡುವ ಮೂಲಕ ದೇಶದ ಆರ್ಥಿಕ ವ್ಯವಸ್ಥೆಗೆ ತನ್ನದೆ ಆದ ಕೊಡುಗೆ ನೀಡುತ್ತಿದೆ.

ಇಂತಹ ಸಹಕಾರ ಸಂಘಗಳ ಸಾಲಿನಲ್ಲಿ ಕೇರಳ ರಾಜ್ಯದ ಕೋಜಿಕೋಡ್ ಜಿಲ್ಲೆಯ ಉರುಲಂಗಲ್ ಲೇಬರ್ ಕಾಂಟ್ರಾಕ್ಟ್ ಕೋ–ಆಪರೇಟಿವ್ ಸೊಸೈಟಿ (ಯುಎಲ್‌ಸಿಸಿಎಸ್)ಯು "ಕಾರ್ಮಿಕರಿಂದ, ಕಾರ್ಮಿಕರಿಗಾಗಿ, ಕಾರ್ಮಿಕರಿಗೋಸ್ಕರ" ಎಂಬ ಧ್ಯೇಯದೊಂದಿಗೆ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಯುಎಲ್‌ಸಿಸಿಎಸ್ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಸೇರಿದ ಬಡಕಾರ್ಮಿಕರಿಗೆ ಹಸಿವು, ಬಡತನ ಮತ್ತು ದಬ್ಬಾಳಿಕೆಯಿಂದ ಪಾರಾಗಲು ಸಹಾಯ ಮಾಡುವುದು ಈ ಸಂಘದ ಪ್ರಮುಖ ಉದ್ದೇಶವಾಗಿದೆ.

ಈ ಸಂಘವು ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಪ್ರಗತಿಪಥದಲ್ಲಿ ಸಾಗುತ್ತ ತನ್ನ ವೈವಿಧ್ಯಮಯ ವಿಶಿಷ್ಟ ಕಾರ್ಯಚಟುವಟಿಕೆಗಳ ಮೂಲಕ ವೈಭವವನ್ನು ಹೆಚ್ಚಿಸಿಕೊಂಡು ಇತ್ತೀಚೆಗಷ್ಟೆ ಶತಮಾನೋತ್ಸವ ಆಚರಿಸಿಕೊಂಡಿರುವುದು ಸಂತಸದ ಸಂಗತಿ.




**ಕೇರಳದ ಕಾರ್ಮಿಕರ ಸಹಕಾರ ಸಂಘವು ವಿಶ್ವದಲ್ಲಿ ಎರಡನೇ ದೊಡ್ಡ ಸಂಸ್ಥೆಯಾದರೆ. ಏಷ್ಯಾ ಖಂಡದ ಮೊದಲನೇ ಅತಿದೊಡ್ಡ ಕಾರ್ಮಿಕ ಸಹಕಾರಿ ಸಂಘ ಎಂದು ಪ್ರಶಂಸೆಗೆ ಪಾತ್ರವಾಗಿದೆ. ಇದು ದೇಶದ ಸಹಕಾರ ವಲಯ ಹೆಮ್ಮೆ ಪಡುವ ವಿಷಯವಾಗಿದೆ.**

**ಕಾರ್ಮಿಕರ ಸಹಕಾರ ಸಂಘ ಸ್ಥಾಪನೆ :** ಕೇರಳದ ಮಲಬಾರ್ ಪ್ರದೇಶದಲ್ಲಿ ಉರುಲುಂಗಲ್‌ನಲ್ಲಿ ಸಮಾಜ ಸುಧಾರಕ ಸಂತ ವಾಗ್ಭದಾನಂದ ಅವರು 1925ರಲ್ಲಿ ಉರುಲಂಗಲ್ ಲೇಬರ್ ಕಾಂಟ್ರಾಕ್ಟ್ ಕೋ–ಆಪರೇಟಿವ್ ಸೊಸೈಟಿಯನ್ನು ಜಾತಿ ವ್ಯವಸ್ಥೆಯ ಅರಾಜಕತೆಗಳ ವಿರುದ್ಧ ಒಂದು ಹೊಸ ಜನಾಂದೋಲನವಾಗಿ ಪ್ರಾರಂಭಿಸಿದರು. ಪಕ್ಷಪಾತದ ಆಚರಣೆಗಳ ವಿರುದ್ಧದ ಸಾಮಾಜಿಕ ಹೋರಾಟದಿಂದಾಗಿ ಉದ್ಯೋಗ ಕಳೆದುಕೊಂಡ ಕೌಶಲ್ಯ ಪೂರ್ಣ ಕಾರ್ಮಿಕರು ಸಹಕಾರ ಆಂದೋಲನದಲ್ಲಿ ಪಾಲ್ಗೊಂಡುತಮ್ಮ ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಈ ಸಂಘಸ್ಥಾಪಿಸಿದರು.

ಸಂಘವು ಕೇವಲ 16 ಸದಸ್ಯರೊಂದಿಗೆ ಪ್ರಾರಂಭವಾಗಿ ಮೊದಲುರೂ. 200 ರಿಂದ 300 ಸಣ್ಣ ಕೂಲಿ ಕೆಲಸಗಳನ್ನು ಕೈಗೊಳ್ಳುತ್ತಿತ್ತು. 1962

**ಶತಮಾನೋತ್ಸವ :** ಉರಾಲುಂಗಲ್ ಲೇಬರ್ ಕೋ–ಆಪರೇಟಿವ್ ಸೊಸೈಟಿಯ (ಯುಎಲ್‌ಸಿಸಿಎಸ್) ಶತಮಾನೋತ್ಸವ ಕಾರ್ಯಕ್ರಮವನ್ನು ಫೆಬ್ರವರಿ 13 ರಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಉದ್ಘಾಟಿಸಿ, ನಂತರ ಮಾತನಾಡಿದ ಅವರು, ಅಲ್ಪ ಮಟ್ಟದ ಹಣದಲ್ಲಿ ಆರಂಭವಾದ ಈ ಸಂಸ್ಥೆಯು ಶತಮಾನ ಕಾಲ ಆಲದ ಮರದಂತೆ ಬೆಳೆದು ನಿಂತಿದೆ. ಒಂದು ದೊಡ್ಡ ಮಾದರಿ ಸಹಕಾರ 'ಕಾರ್ಮಿಕರ ಸಂಘವಾಗಿರುವುದು ಹೆಮ್ಮೆಯಾಗಿದೆ. ಕೇರಳದ ಜನತೆಯ ಸಾಮಾಜಿಕ–ಆರ್ಥಿಕತೆಯಲ್ಲಿ ಗಮನಾರ್ಹವಾದ ಸಾಧನೆ ಮಾಡುತ್ತಿದೆ. ಕೇರಳ ರಾಜ್ಯದ ಒಂದು ಅತ್ಯುತ್ತಮ ಸಹಕಾರ ಸಂಘವಾಗಿದೆ. ಈ ಸಂಘವು ಇದೂವರೆಗೂ7,500 ಕ್ಕೂ ಹೆಚ್ಚು ಯೋಜನೆಗಳು ಪೂರ್ಣಗಳಿಸಿದೆ ಮತ್ತು ಮೂಲಸೌಕರ್ಯ, ಉತ್ಪಾದನೆ ಮತ್ತು ಆರೋಗ್ಯರಕ್ಷಣೆಯನ್ನು ವ್ಯಾಪಿಸಿರುವ ವೈವಿಧ್ಯಮಯ ಕಾರ್ಯಗಳ ಮೂಲಕ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆ (ಐಅಂ)ಯ ಸದಸ್ಯರಾಗಿರುವ ಏಕೈಕ ಪ್ರಾಥಮಿಕ ಸಹಕಾರಿಎಂದು ಸಚಿವಾಲಯವು ಸೇರಿಸಿದೆ ಎಂದರು.

ರಲ್ಲಿಅದುತೆಗೆದುಕೊಂಡ ಮೊದಲ ಪ್ರಮುಖ ಕಾರ್ಮಿಕ ಒಪ್ಪಂದವು ರಸ್ತೆಪಾದಚಾರಿ ಮಾರ್ಗವನ್ನು ಹಾಕುವ ಕೆಲಸವಾಗಿತ್ತು. ಪ್ರಸ್ತುತ ಈ ಸಂಘವು ರೂ1,700 ಕೋಟಿ ಮೌಲ್ಯದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸುವ ಸಾಮರ್ಥ್ಯ ಹೊಂದಿರುವ ಪ್ರಮುಖ ಕಾರ್ಮಿಕ ಗುತ್ತಿಗೆ ಸಂಘವಾಗಿ ಬೆಳೆದಿದೆ.

**ಪ್ರಸ್ತುತ ಸಂಘವು 13,000ಕ್ಕೂ ಹೆಚ್ಚು ಕಾರ್ಮಿಕರು, 1000ಕ್ಕೂ ಹೆಚ್ಚು ಆಧುನಿಕ ತಂತ್ರಜ್ಞರು, 1000ಕ್ಕೂ ಹೆಚ್ಚು ಎಂಜಿನಿಯರ್‌ಗಳು ಮತ್ತು 200ಕ್ಕೂ ಹೆಚ್ಚು ವಲಸೆ ಕಾರ್ಮಿಕರು ಸಮಾಜದ ಸದಸ್ಯರಾಗಿ ವಾರ್ಷಿಕವಾಗಿ 14000 ಕೋಟಿರೂ. ವಹಿವಾಟು ನಡೆಸುವ ಮೂಲಕ ದೇಶದ ಸಹಕಾರಕ್ಷೇತ್ರದ ಹಿರಿಮೆ ಹೆಚ್ಚಿಸಿದೆ. ಒಟ್ಟಾರೆ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ 18,000 ಕ್ಕೂ ಹೆಚ್ಚು ಕಾರ್ಮಿಕರಿಗೆ ನೇರಉದ್ಯೋಗವನ್ನುಒದಗಿಸುತ್ತಿದೆ.**

**ಉದ್ದೇಶ :** ವಿನೂತನ ಯೋಜನೆ, ತಂತ್ರಜ್ಞಾನ, ಪರಿಸರ ಕಾಳಜಿ, ಗುಣಮಟ್ಟದ ಕಾಮಗಾರಿ, ಸಮಯಕ್ಕೆ ಸರಿಯಾಗಿ ಕೆಲಸ ಮುಗಿಸುವ ಸಮಯ ಪ್ರಜ್ಞೆ, ಉತ್ಕೃಷ್ಟವಾದ ಸೇವೆ ನೀಡುವುದು ಈ ಸಂಘದಮೂಲ ಉದ್ದೇಶವಾಗಿದೆ. ಕಾರ್ಯಾಚರಣೆಯ ದಕ್ಷತೆಗಳು, ಗುಣಮಟ್ಟ ಮತ್ತು ಸೇವೆಗಳಲ್ಲಿ ನಿರಂತರ ಸುಧಾರಣೆಗಳನ್ನು ಖಾತ್ರಿಪಡಿಸುವ ಮೂಲಕ ಮೂಲಸೌಕರ್ಯ ಒದಗಿಸುವುದು. ಗುಣಮಟ್ಟ ಮತ್ತುಗ್ರಾಹಕರ ತೃಪ್ತಿಯ ಜಾಗತಿಕ ಮಾನದಂಡಗಳಿಗೆ ಹೊಂದಿಕೆಯಾಗುವ ಸಮರ್ಥನೀಯ ಮತ್ತು ಮೌಲ್ಯವರ್ಧಿತ ಎಂಜಿನಿಯರಿಂಗ್ ಒಳಗೊಳ್ಳುವ ಮೂಲಕ ಉತ್ತಮ ಸೇವೆಗಳನ್ನು ನೀಡುತ್ತಿದೆ. ಬದಲಾಗುತ್ತಿರುವ ಸಾಮಾಜಿಕ ಮತ್ತು ಸಾಂಸ್ಥಿಕ ಅಗತ್ಯಗಳಿಗೆ ಹೊಂದಿಕೊಳ್ಳುವ ನವೀನ ತಂತ್ರಜ್ಞಾನಗಳನ್ನು ಪೂರ್ವಭಾವಿಯಾಗಿ ಅಳವಡಿಸಿಕೊಳ್ಳುತ್ತದೆ. ಶಿಕ್ಷಣ, ಕೌಶಲ್ಯ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸುವ ಮೂಲಕ ಕಾರ್ಮಿಕ ಬಲವನ್ನು ಸಬಲೀಕರಣಗೊಳಿಸುವುದಾಗಿದೆ.

**ಎರಡುಕ್ರಷರ್ ಘಟಕಗಳ ಸ್ಥಾಪನೆ :** ಕಚ್ಚಾ ಸಾಮಗ್ರಿಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಖಚಿತಪಡಿಸಿಕೊಳ್ಳಲು ಸಂಘವು ತೊಟ್ಟುಮುಕ್ಕಂ ಮತ್ತು ಕುಟ್ಟಿಯಾಡಿಯಲ್ಲಿ ಎರಡುಕ್ರಷರ್ ಘಟಕಗಳನ್ನು ಸ್ಥಾಪಿಸಿದೆ. ಗಣಿಗಾರಿಕೆ ಮತ್ತು ಕಲ್ಲು ಪುಡಿಮಾಡುವಿಕೆಯ ಕಾರ್ಯದ ಜೊತೆಗೆ, ಘಟಕಗಳಲ್ಲಿ ಉಳಿದ ಜಮೀನಿನಲ್ಲಿ ಸಾವಯವ ಕೃಷಿ ಮತ್ತು ಜಾನುವಾರು ಸಾಕಣೆಯ ಕೆಲಸವನ್ನು ನಿರ್ವಹಿಸಲಾಗುತ್ತಿದೆ.

**ಐಸಿಎ ಖಾಯಂ ಸದಸ್ಯತ್ವ ಪಡೆದ ಸಹಕಾರಿ ಸಂಘ :** ಈ ಸಹಕಾರಿ ಸಂಘವು ಅಂತಾರಾಷ್ಟ್ರೀಯ ಸಹಕಾರ ಒಕ್ಕೂಟದ (ಐಸಿಎ) ಖಾಯಂ ಸದಸ್ಯರಾಗಿ ಗುರುತಿಸಲ್ಪಟ್ಟ ಮೊದಲ ಪ್ರಾಥಮಿಕ ಸಹಕಾರ ಸಂಸ್ಥೆಯಾಗಿದೆ. ಐಸಿಎ ಖಾಯಂ ಸದಸ್ಯ ಸ್ಥಾನ ಪಡೆದ ಭಾರತದ ಏಕೈಕ ಪ್ರಾಥಮಿಕ ಸಂಘ ಎಂಬ ಹೆಗ್ಗಳಿಕೆಯೂ ಇದೆ. ಕೇರಳ ಸರ್ಕಾರವು ಈ ಸಂಘದ ಕೆಲಸದ ಸಮಯ ಮತ್ತು ಗುಣಮಟ್ಟ ಸೇವೆಗಳನ್ನು ಪ್ರಶಂಸಿಸಿ ಮಾನ್ಯತೆ ಪಡೆದಏಜೆನ್ಸಿ ಸ್ಥಾನಮಾನವನ್ನು ನೀಡಿದೆ.

**ಯುಎಲ್‌ಸಿಸಿಎಸ್ ವಿವಿಧ ಕ್ಷೇತ್ರಗಳಿಗೆ ವೈವಿಧ್ಯಗೊಳಿಸುವುದು :** ಯುಎಲ್‌ಸಿಸಿಎಸ್ ಉದ್ಯೋಗಿಗಳ ಮಕ್ಕಳು ಉನ್ನತ ಶಿಕ್ಷಣ ಹಾಗೂ ಅವರಿಗೂ ಸೂಕ್ತವಾದ ಉದ್ಯೋಗವನ್ನು ದೊರೆಯುವುದು ಅನಿವಾರ್ಯವಾಗಿದೆ. ಮುಂದಿನ ತಲೆಮಾರಿನ ಮಾಹಿತಿ ತಂತ್ರಜ್ಞಾನಕ್ಕೆ ಉದ್ಯೋಗಾವಕಾಶ ಕಲ್ಪಿಸುವುದು ಅತ್ಯಂತ ಸೂಕ್ತ ಡೊಮೇನ್ ಮತ್ತು ರಾಜ್ಯದ ಉತ್ತರ ಭಾಗಕ್ಕೆ ಐಟಿ ಪಾರ್ಕ್ ಅತ್ಯಗತ್ಯ ಎಂಬುದನ್ನು ಮನಗಂಡು ಯುಎಲ್‌ಸಿಸಿಎಸ್ ಮಲಬಾರ್‌ನಲ್ಲಿ ಸೈಬರ್ ಪಾರ್ಕ್ ಸ್ಥಾಪಿಸಿದೆ. ಇಂದು, ಐಟಿ ಪಾರ್ಕ್ ವಿನ್ಯಾಸ ಮತ್ತು ತಂತ್ರಜ್ಞಾನ ಸೇವೆಗಳನ್ನು ಒದಗಿಸುವ ಟಾಟಾಎಲ್ಕ್ಸಿ ಸೇರಿದಂತೆ 40 ಕಂಪನಿಗಳಲ್ಲಿ 3,000 ಉದ್ಯೋಗಿಗಳನ್ನು ಹೊಂದಿದೆ.



**ಈ ಸಂಘದ ಸಾಧನೆಗಳು ಹೀಗಿವೆ :** ಆರಂಭದಲ್ಲಿ ಸಂಘವು, 1924ರ ಮಲಬಾರ್ ಪ್ರವಾಹದಲ್ಲಿ ನಾಶವಾದ ಮೀನು ಮಾರುಕಟ್ಟೆಗೆ ಗೋಡೆಗಳನ್ನು ನಿರ್ಮಿಸುವುದು ಮೊದಲ ಕಾರ್ಯವಾಗಿತ್ತು, ಇದರಿಂದಅಲ್ಲಿಯ ನೂರಾರು ಮೀನುಗಾರರಿಗೆ ಸಹಾಯವಾಗಿತ್ತು. ಇದರಿಂದ ಪ್ರೇರಣಗೊಂಡ ಸಂಘವು ಮುಂದೆ ಹಲವಾರು ಕೆಲಸಗಳನ್ನು ತೊಡಗಿಸಿಕೊಂಡು ಯಶಸ್ವಿಯಾಗಿ ಮುನ್ನಡೆಯುತ್ತಾ ಶತಮಾನದಅವಧಿಯ ಸರ್ಥಕ ಸೇವೆ ಸಲ್ಲಿಸಿದೆ.

- ಈ ಸೊಸೈಟಿ ಇದುವರೆಗೆ 577 ಸೇತುವೆಗಳ ನಿರ್ಮಾಣ ಮಾಡಿದೆ.
- 71,500 ಕಿ.ಮೀ ದೂರರಸ್ತೆ ನಿರ್ಮಾಣ ಮಾಡಿದೆ.
- 2,400 ಕಟ್ಟಡಗಳನ್ನು ನಿರ್ಮಿಸಿದೆ. ಸಂಘವು 7,500ಕ್ಕೂ ಹೆಚ್ಚು ಯೋಜನೆಗಳನ್ನು ಕಾರ್ಯಗತಗೊಳಿಸಿದೆ.
- ಸಂಘವು ಕ್ಯಾಲಿಕಟ್ ಸಿಟಿ ರಸ್ತೆ ಸುಧಾರಣಾಯೋಜನೆ, ಕಣ್ಣೂರಿನ ಹಿಲ್ ಹೆದ್ದಾರಿ ಮತ್ತುಯುಎಲ್ ಸೈಬರ್‌ಪಾರ್ಕ್‌ನಒಂದು ಭಾಗವನ್ನು ಕಾರ್ಯಗತಗೊಳಿಸಿದೆ.
- ಸೈಬರ್‌ನ ಪಾರ್ಕ್ 72 ಐಟಿ ಕಂಪನಿಗಳಲ್ಲಿ 2,000 ಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿದೆ.


● ಯುಎಲ್‌ಸಿಸಿಎಸ್ 4,800 ಕೋಟಿ ರೂ.ಗಳ ಆರ್ಡರ್‌ಲಭಿಸಿದೆ.

ಇದು ಸಾಮಾನ್ಯವಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ ಲೋಕೋಪಯೋಗಿ ಇಲಾಖೆ (ಕೇರಳ), ಪಂಚಾಯತಿರಾಜ್ ಸಚಿವಾಲಯ ಮತ್ತು ಸ್ಥಳೀಯ ಆಡಳಿತದ ಯೋಜನೆಗಳನ್ನು ನಿರ್ವಹಿಸುತ್ತಿದೆ. ಸಂಘವು ಶತಮಾನೋತ್ಸ ಆಚರಿಸಿಕೊಂಡ ನಿಮಿತ್ತ ಸಂಘದ ಅಧ್ಯಕ್ಷರಾದ ರಮೇಶನ್ ಪಾಲೇರಿ ಹೀಗೆ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

**ಪ್ರಯೋಜನಗಳು :** ತಾಂತ್ರಿಕ ಆಸ್ತಿಗಳ ವರ್ಧನೆ, ಆರ್ಥಿಕ ಬಲವನ್ನು ಹೆಚ್ಚಿಸುವುದು, ಮಾನವ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸೇತುವೆ ಮತ್ತು ಹೆದ್ದಾರಿ ಎಂಜಿನಿಯರಿಂಗ್‌ಗಾಗಿ ತಾಂತ್ರಿಕ ಶಾಖೆಯನ್ನು ಸ್ಥಾಪಿಸುವ ಮೂಲಕ ಕಾರ್ಮಿಕ ಪೂರೈಕೆಯನ್ನು ಬಲಪಡಿಸುವುದು. ಬೆಳವಣಿಗೆಗೆ ಅನುಕೂಲವಾಗುವಂತೆ ವ್ಯವಸ್ಥೆಗಳು ಮತ್ತು ಕಾರ್ಯವಿಧಾನಗಳನ್ನು



ಅಭಿವೃದ್ಧಿಪಡಿಸಲು ಸಾಂಸ್ಥಿಕ ಮರುವಿನ್ಯಾಸವನ್ನು ಇದು ಒಳಗೊಂಡಿದೆ ಎಂದು ಅಧ್ಯಕ್ಷರಾದ ರಮೇಶನ್ ಪಾಲೇರಿ ಹೇಳಿದ್ದಾರೆ.




**ಪ್ರಶಂಸೆ :** 2013ರ ಭಾರತೀಯ ಸಹಕಾರಿಕಾಂಗ್ರೆಸ್ ಈ ಸಂಘವನ್ನು ಭಾರತದ ಅತ್ಯುತ್ತಮ ಕಾರ್ಮಿಕರ ಸಹಕಾರಿ ಸಂಘವೆಂದು ಒಪ್ಪಿಕೊಂಡಿದೆ. ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟವು ಪ್ರಕಟಿಸಿದೆ. ವಿಶ್ವ ಸಹಕಾರಿ ಮಾನಿಟರ್‌ನಲ್ಲಿ ಎರಡನೇ ಸ್ಥಾನದಲ್ಲಿದೆ. 2018 ಇಖಂಈ ನಿಂದ ಮೊದಲ ಸಾಮಾಜಿಕ ವ್ಯಾಪಾರ ಪ್ರಶಸ್ತಿ. 2017 ಕೇರಳದ ಅತ್ಯುತ್ತಮ ಲೇಬರ್ ಪವರ್ ಬ್ರಾಂಡ್‌ಗಾಗಿ ಭವಿಷ್ಯದ ಕೇರಳ ಬ್ರಾಂಡ್ ಪ್ರಶಸ್ತಿ. ಕಾರ್ಮಿಕರ ಸಹಕಾರಿ ಸಂಸ್ಥೆಯು ಉದ್ಯಮಶೀಲ ಸಹಕಾರಕ್ಕಾಗಿ ಏಷ್ಯಾ ಪೆಸಿಫಿಕ್ ಸಹಕಾರ ಶ್ರೇಷ್ಠ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿ, ಪ್ರಶಂಸೆ ಹಾಗೂ ಸನ್ಮಾನಗಳಿಗೆ ಭಾಜನವಾಗಿದೆ.

**ಸಾಮಾಜಿಕ ಸೇವೆ :** ನೂರು ವರ್ಷಗಳ ಹಿಂದೆಗ್ರಾಮದ ಸಾಮಾಜಿಕ-ಆರ್ಥಿಕ ಸವಾಲುಗಳನ್ನು ಎದುರಿಸಲು ಈ ಸಹಕಾರಿ ಸಂಘವು ರೂಪುಗೊಂಡಿತು. ಅದು ಬೆಳೆದಂತೆ ಸಾಮಾಜಿಕ ಜವಾಬ್ದಾರಿಯನ್ನು ನಿಕಟವಾಗಿ ನಿರ್ವಹಿಸುತ್ತಿದೆ. ವಯೋವೃದ್ಧರು ಮತ್ತುಅಂಗವಿಕಲರ, ವಿಶೇಷವಾಗಿ ಬೌದ್ಧಿಕವಾಗಿ ವಿಕಲಾಂಗರ ಸಾಮಾಜಿಕ ಉನ್ನತಿಗಾಗಿ ಕೆಲಸ ಮಾಡಿದೆ. ಕಳೆದ ಕೆಲವು ವರ್ಷಗಳಿಂದ, ಸಹಕಾರ ಸಂಘವು ಅವರನ್ನು ಸಬಲೀಕರಣಗೊಳಿಸಲು ಸರಿಯಾದ ಕೌಶಲ್ಯ-ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯಶಸ್ವಿಯಾಗಿದೆ. ಯುಎಲ್‌ಕೇರ್ ಮಡಿತಟ್ಟು ಸಂಸ್ಥೆಯು18 ವರ್ಷಕ್ಕಿಂತ ಮೇಲ್ಪಟ್ಟ ಬೌದ್ಧಿಕವಾಗಿ ಸವಾಲಿನ ತರಬೇತಿ ಪಡೆಯಬಹುದಾದ ಗುಂಪುಗಳ ಪುನರ್ವಸತಿ ಮತ್ತು ಕೌಶಲ್ಯ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ. ಡೌನ್ ಸಿಂಡ್ರೋಮ್ ಟ್ರಸ್ಟ್, ಕೋಝಿಕ್ಕೋಡ್ (ದೋಸ್ಟ್) ಮತ್ತು ಯುಎಲ್‌ಕೇರ್ ಫೌಂಡೇಶನ್ ಜಂಟಿಯಾಗಿ ಪ್ರಾರಂಭಿಸಿದೆ.

**ಸಹಕಾರ ವಿಶ್ವವಿದ್ಯಾನಿಲಯದ ಬಗ್ಗೆ :** ಒಬ್ಬ ಇಂಜಿನಿಯರಿಂಗ್ ಪದವೀಧರನು ಕೆಲಸದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು 5-10 ವರ್ಷಗಳನ್ನು ತೆಗೆದುಕೊಳ್ಳುತ್ತಾನೆ. ಈ ಅಂತರವನ್ನು ಕಡಿಮೆ ಮಾಡಲು ನಾವು ಶಿಕ್ಷಣವನ್ನು ಪ್ರಾಯೋಗಿಕ ಕೌಶಲ್ಯಗಳೊಂದಿಗೆ ಲಿಂಕ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ. ಈ ದೃಷ್ಟಿಯನ್ನು ಪೂರೈಸಲು, ನಾವು ಮಾದರಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ ಎಂದರು. ಈ ಸಂಸ್ಥೆಯು ಶತಮಾನೋತ್ಸವನ್ನು ಆಚರಿಸಿಕೊಳ್ಳುವ ಮೂಲಕ ಹೊಸ ಅಧ್ಯಾಯ ನಿರ್ಮಿಸಿ ಗ್ರಾಮೀಣ ಪ್ರದೇಶದ ಕಾರ್ಮಿಕರಿಗೆ ನೇರಉದ್ಯೋಗವನ್ನು ನೀಡುವ ಮೂಲಕ ಅತಿದೊಡ್ಡಕಾರ್ಮಿಕ ಸಹಕಾರ ಸಂಘವಾಗಿ ಬೆಳೆದು ನಿಂತಿರುವುದು ಸಹಕಾರ ವಲಯಕ್ಕೆ ಹಿರಿಮೆಯನ್ನು ತಂದಿದೆ. ಈ ಸಂಘವು ಸಹಕಾರ ಸಂಸ್ಥೆಗೆ ಅತ್ಯುತ್ತಮ ಮಾದರಿ ಎನಿಸಿಕೊಂಡು ಸ್ಫೂರ್ತಿದಾಯಕವಾಗಿದೆ ಎನಿಸುತ್ತದೆ.

**- ಲೇಖನ : ಸುಧಾ**